# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026


ಸಂಪುಟ:02 • ಸಂಚಿಕೆ: 108 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 25.10.2024 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 108 • PRGI No:KARKAN/2023/88055 • VIJAYANAGARA • 25.10.2024 • Friday • Page:04 • Rs:2







## ಆನಂದ ಬಾಣ




## ಮೈಕ್ರೋ ನ್ಯೂಸ್

### ವಿವಿಧ ಸಮನ್ವಯ ಸಮಿತಿ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**
ತಾಲೂಕು ಮಟ್ಟದ ಬಾಲ್ಯ ವಿವಾಹ ನಿಷೇಧ ಸಮನ್ವಯ ಸಮಿತಿ ಹಾಗೂ ಕಾವಲು ಸಮಿತಿ ಮತ್ತು ಕೌಟುಂಬಿಕ ದೌರ್ಜನ್ಯ ಕಾಯ್ದೆ ಸಮಿತಿ ಹಾಗೂ ಮಾತೃವಂದನಾ ಯೋಜನಾ ಸಭೆಯನ್ನು ಹೊಸಪೇಟೆ ತಹಶಿಲ್ದಾರರ >>4

### ಸಂಡೂರು ಉಪ ಚುನಾವಣೆ ಚುನಾವಣಾ ಸಾಮಾನ್ಯ ವೀಕ್ಷಕರಾಗಿ ಡಾ.ದಿವ್ಯಾ ಎಸ್ ಅಯ್ಯರ್

**ಹಂಪಿ ಟೈಮ್ಸ್ ಬಳ್ಳಾರಿ**
ಸಂಡೂರು ವಿಧಾನಸಭೆ ಉಪಚುನಾವಣೆಗೆ ಚುನಾವಣಾ ಸಾಮಾನ್ಯ ವೀಕ್ಷಕರಾಗಿ ಐಎಎಸ್ ಅಧಿಕಾರಿ ಡಾ.ದಿವ್ಯಾ ಎಸ್ ಅಯ್ಯರ್ ಅವರನ್ನು ಭಾರತೀಯಚುನಾವಣಾ ಆಯೋಗವು ನೇಮಿಸಿದೆ. >>3

# ಗಾಂಧೀಜಿ ಆದರ್ಶಗಳು ಎಂದಿಗೂ ಪ್ರಸ್ತುತ

## ಶಾಸಕ ಹೆಚ್.ಆರ್. ಗವಿಯಪ್ಪ ಹೇಳಿಕೆ | ಗಾಂಧೀಜಿಯ ಸತ್ಯನಿಷ್ಠೆ, ಅಹಿಂಸೆ, ಶುಚಿತ್ವ ಪಾಲಿಸೋಣ

## ಗಾಂಧಿ ಓದು ಅಭಿಯಾನ–2024 | ಬೇಧ–ಭಾವ ಮಾಡದೇ ಸಹಬಾಳ್ವೆಯ ಜೀವನ ನಡೆಸಿ





**ಹಂಪಿ ಟೈಮ್ಸ್ ಹೊಸಪೇಟೆ**
ಮಹಾತ್ಮ ಗಾಂಧೀಜಿಯವರ ಜೀವನ ಮೌಲ್ಯಗಳು ಇಂದಿನ ವಿದ್ಯಾರ್ಥಿ ಯುವಜನರಿಗೆ ಮಾದರಿಯಾಗಿದೆ. ಈ ನಿಟ್ಟಿನಲ್ಲಿ ಅವರ ಸತ್ಯನಿಷ್ಠತೆ, ಅಹಿಂಸಾವಾದ ಮತ್ತು ಶುಚಿತ್ವದತ್ತ ಎಲ್ಲರೂ ಸೇರಿ ಹೆಜ್ಜೆ ಹಾಕೋಣ ಎಂದು ಕ್ಷೇತ್ರದ ಶಾಸಕ ಹೆಚ್.ಆರ್. ಗವಿಯಪ್ಪ ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಪರ್ಕ ಘಟಕ ಮತ್ತು ಕನ್ನಡ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಇವರ ಸಹಯೋಗದಲ್ಲಿ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಹಾಗೂ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗ, ಹೊಸಪೇಟೆಯಲ್ಲಿ ಗುರುವಾರ ನಡೆದ ಗಾಂಧಿ ಓದು ಅಭಿಯಾನ–2024 ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಹಾತ್ಮ ಗಾಂಧೀಜಿಯವರು ಒಳ್ಳೆಯ ಓದುಗರಾಗಿದ್ದರು, ಬರೆಯುತ್ತಿದ್ದರು, ಪತ್ರಕರ್ತರಾಗಿದ್ದರು, ಪ್ರತಿ ದಿನ ಸಾಕಷ್ಟು ದೂರ ನಡೆಯುವ ಮೂಲಕ ಶ್ರಮದಾನ ಮಾಡುತ್ತಿದ್ದರು. ಜೊತೆಗೆ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದರು. ಇವರ ಆದರ್ಶ ಮಾರ್ಗಗಳು ಎಂದಿಗೂ ಪ್ರಸ್ತುತವಾಗಿದ್ದು ಇಂದಿನ ಯುವ ಪೀಳಿಗೆ ವಿದ್ಯಾರ್ಥಿ ಜೀವನದಲ್ಲಿ ಗಾಂಧೀಜಿಯವರನ್ನು ಸದಾ ಸ್ಮರಿಸಿಕೊಳ್ಳಬೇಕೆಂದರು.

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಿ.ವಿ.ಪರಮಶಿವಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಮುಂದಾಳತ್ವ ವಹಿಸಿ ಸಕ್ರಿಯವಾಗಿ ಭಾಗಿಯಾದರು. ಸತ್ಯ, ಶಾಂತಿ, ಅಹಿಂಸೆಯ ತತ್ವಗಳಿಂದ ಬ್ರಿಟಿಷರನ್ನು ಎದುರಿಸಿದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಹೋರಾಟಗಾಥೆಯು ಸದಾ ಸ್ಮರಣೀಯವಾಗಿದೆ ಎಂದರು.

ಸಂಪನ್ಮೂಲ ವ್ಯಕ್ತಿಗಳ ಕುರಿತಾಗಿ ಹಿಟ್ನಾಳ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ. ಟಿ.ಹೆಚ್. ಬಸವರಾಜು ಮಾತನಾಡಿ, ಗಾಂಧೀಜಿ ಸಂಘಟಿತವಾಗಿ ನಡೆಯದಿದ್ದರೆ, ಅಂಬೇಡ್ಕರ್ ಸಂವಿಧಾನ ರಚಿಸದಿದ್ದರೆ, ನಾವು ಶಿಕ್ಷಣದಿಂದ ವಂಚಿತರಾಗುತ್ತಿದ್ದೇವು. ಗಾಂಧೀಜಿಯವರು ದೇಶ, ರಾಷ್ಟ್ರ ಎಂದರೇನು ಎಂದು ತಿಳಿಸಲಿಕ್ಕೆ ದೇಶವನ್ನು ಸಂಘಟಿಸುತ್ತಾರೆ. ಶಿಕ್ಷಣಕ್ಕಾಗಿ ಶ್ರಮಿಸಿದ ಸದೃಢ ಸಮಾಜದ ರೂವಾರಿಗಳಾದ ಗಾಂಧೀಜಿ, ಬುದ್ಧ, ಬಸವಣ್ಣ, ಅಂಬೇಡ್ಕರ್ ಅವರನ್ನು ನಾವು ಸ್ಮರಣೆಯಲ್ಲಿಟ್ಟುಕೊಳ್ಳಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಶಾಲಾ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಚನ್ನಬಸಪ್ಪ ಅವರು ಪ್ರಸ್ತಾವಿಕವಾಗಿ ಮಾತನಾಡಿ, ಜಾತಿ, ಧರ್ಮದ ಬೇಧ–ಭಾವ ಮಾಡದೇ ಎಲ್ಲರೂ ಸಹಬಾಳ್ವೆಯ ಜೀವನ ನಡೆಸಬೇಕು ಎಂದು ಹೇಳಿದರು.

ಲ್ಯಾಪ್‌ಟಾಪ್ ವಿತರಣೆ: 2022–23 ನೇ ಸಾಲಿನ ಎಸ್.ಎಸ್.ಎಲ್.ಸಿಯಲ್ಲಿ 3ನೇ ಸ್ಥಾನ ಪಡೆದು ಉತ್ತಮ ಅಂಕ ಗಳಿಸಿದ ಹೊಸಪೇಟೆ ತಾಲೂಕಿನ ಸರ್ಕಾರಿ ಎಕ್ಸ್ ಮುನಿಸಿಪಾಲ್ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿ ಎಸ್.ಕಾಮಾಕ್ಷಿ, ತುಂಗಭದ್ರಾ ಡ್ಯಾಂನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಪ್ರತಿಷ್ಠಾ, ಕಮಲಾಪುರ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿ ಜ್ಯೋತಿಕಾ, ಹಾಗೂ ಹೊಸಪೇಟೆ ತಾಲೂಕಿನ ಆರ್.ಎಮ್.ಎಸ್.ಎ ಬೈಲುವದ್ದಿಗೇರಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಎ.ಪ್ರತಾಪ್ ಇವರುಗಳಿಗೆ ಲ್ಯಾಪಟಾಪ್ ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದ ಉಪಪ್ರಾಚಾರ್ಯರಾದ ವೆಂಕಟೇಶ ಕುಲಕರ್ಣಿ, ಕನ್ನಡ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾದ ಡಾ. ಎಸ್.ವೈ. ಗುರುಶಾಂತ್, ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಮುಖ್ಯ ಗುರುಗಳಾದ ಶ್ರೀಮತಿ ಪ್ರವೀಣಾ ಹಲಗನಿ, ಹಾಗೂ ಕಾಲೇಜಿನ ಸಿಬ್ಬಂದಿಗಳು, ಶಾಲಾ ಕಾಲೇಜಿನ ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಸರ್ಕಾರಿ ಕಾಲೇಜಿನ ಕನ್ನಡ ಶಿಕ್ಷಕರಾದ ರಾಜಶೇಖರ ಅವರು ಸ್ವಾಗತಿಸಿದರು. ಶಿಕ್ಷಕಿಯಾದ ವಿ. ಮಾಧವಿ ಅವರು ನಿರೂಪಿಸಿದರು. ಹಾಗೇ ಶಿಕ್ಷಕಿಯಾದ ಶಿವಮ್ಮ ಅವರು ವಂದನಾರ್ಪಣೆ ಮಾಡಿದರು.

# ಬಸ್ ಪಲ್ಟಿ, ಮಹಿಳೆ ಮೃತ ಹಲವರಿಗೆ ಗಾಯ

## ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಆಸ್ಪತ್ರೆಗೆ ಭೇಟಿ, ಸಾಂತ್ವಾನ





**ಹಂಪಿ ಟೈಮ್ಸ್ ಹರಪನಹಳ್ಳಿ**
ತಾಲ್ಲೂಕಿನ ಹರಪನಹಳ್ಳಿ ದಾವಣಗೆರೆ ಮದ್ಯೆ ಬರುವ ಸತ್ತೂರು ಗ್ರಾಮದ ಬಳಿ ರಾಜ್ಯ ರಸ್ತೆ ಸಾರಿಗೆ ಬಸ್ ಪಲ್ಟಿಯಾಗಿ ಸ್ಥಳದಲ್ಲೇ ಒಬ್ಬ ಮಹಿಳೆ ಮೃತಪಟ್ಟಿದ್ದು, ಅನೇಕರಿಗೆ ಗಾಯವಾದ ಘಟನೆ ಗುರುವಾರ ಸಂಜೆ ಜರುಗಿದೆ.

ದಾವಣಗೆರೆಯಿಂದ ಹರಪನಹಳ್ಳಿ ಕಡೆಗೆ ಹೊರಟಿದ್ದ ರಾಜ್ಯ ರಸ್ತೆ ಸಾರಿಗೆ ಬಸ್ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಪಕ್ಕದ ಜಮೀನಿನಲ್ಲಿ ಪಲ್ಟಿಯಾಗಿದೆ. ಬಸ್‌ನಲ್ಲಿ ಇದ್ದ ಸತ್ತೂರು ಗ್ರಾಮದ ಹನುಮಕ್ಕ (45) ಮೃತಪಟ್ಟ ಮಹಿಳೆ. 20ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. 6 ಜನರಿಗೆ ದಾವಣಗೆರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಸತ್ತೂರು ಗ್ರಾಮದ ಬಳಿ ನಡೆಯುತ್ತಿರುವ ಕಾಂಕ್ರಿಟ್ ರಸ್ತೆ ದುರಸ್ಥಿಯಿಂದ ಹಾಗೂ ಹರಪನಹಳ್ಳಿ ವಿಭಾಗದ ಬಸ್‌ಗಳು ಹಳೆಯದಾಗಿವೆ. ಇಂತಹ ಬಸ್‌ಗಳಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಶಿಕ್ಷೆ ಎನ್ನುತ್ತಾರೆ ಬಸ್‌ನಲ್ಲಿದ್ದ ಪ್ರಯಾಣಿಕರು.

ವಿಷಯ ಅರಿತ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಗಾಯಾಳುಗಳನ್ನು ಆಸ್ಪತ್ರೆಯಲ್ಲಿ ಭೇಟಿಯಾಗಿ ಅವರ ಶುಶ್ರೂಷೆ ಯನ್ನು ವಿಚಾರಿಸಿ ಮಾನವೀಯತೆ ಮೆರೆದಿ ದ್ದಾರೆ. ಸಾರಿಗೆ ಸಂಸ್ಥೆಯಿಂದ ಹಾಗೂ ಸರಕಾರದಿಂದ ಶೀಘ್ರದಲ್ಲೇ ಪರಿಹಾರ ಒದಗಿಸುತ್ತೇನೆ ಎಂದು ಭರವಸೆ ನೀಡಿದರು.

# ಅನಾವಶ್ಯಕ ಖರ್ಚು ಬೇಡ, ಅಗತ್ಯ ಕಾರ್ಯಗಳಿಗೆ ಮಾತ್ರ ಹಣ ಬಳಸಿ

## ಜಿಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ | ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆ ಸಭೆ



**ಹಂಪಿ ಟೈಮ್ಸ್ ಹೊಸಪೇಟೆ**
ಸೋಲಾರ್ ದೀಪ, ಹೈಮಾಸ್ಕ್ ದೀಪಗಳಿಗೆ ಅನಾವಶ್ಯಕವಾಗಿ ಹಣ ಖರ್ಚು ಮಾಡಬೇಡಿ. ಅಗತ್ಯ ಕಾರ್ಯಗಳಿಗೆ ಹಣ ಬಳಸಿ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು. ಗ್ರಾಮಗಳಲ್ಲಿ ಸೋಲಾರ್ ದೀಪ, ಹೈಮಾಸ್ಕ್ ದೀಪ ಅಳವಡಿಸುವುದು ಬೇಡ, ಈಗಾಗಲೇ ಇರುವ ವಿದ್ಯುತ್ ಕಂಬಳಿಗೆ ಅವಶ್ಯಕತೆ ಇದ್ದಲ್ಲಿ ಹೆಚ್ಚುವರಿಯಾಗಿ ದೀಪಗಳನ್ನು ಅಳವಡಿಸಿ, ಗ್ರಾಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ, ಅಂಗನವಾಡಿಗಳ ಸಮರ್ಪಕ ನಿರ್ವಹಣೆಗೆ ಒತ್ತು ನೀಡಿ ಎಂದು ಅಧಿಕಾರಿಗಳಿಗೆ ಸಲಹೆ ಮಾಡಿದರು.

ಹಡಗಲಿ ತಾಲೂಕಿನ ಹಕ್ಕಂಡಿ ಗ್ರಾಮದಲ್ಲಿ 1ನೇ ಅಂಗನವಾಡಿ ಕೇಂದ್ರಕ್ಕೆ ಸುತ್ತಲು ಕಾಂಪೌಂಡ್ ನಿರ್ಮಾಣ ಕಾಮಗಾರಿ ಮತ್ತು ಗ್ರಾಮ ವಿವಿಧ ಕಡೆಗಳಲ್ಲಿ ಹೈಮಾಸ್ಕ್ ದೀಪಗಳನ್ನು ನಿರ್ಮಿಸಲು, ಹಗರಿಬೊಮ್ಮನಹಳ್ಳಿ ತಾಲೂಕಿನ ಮರಬ್ಬಿಹಾಳು, ಕಲ್ಲಹಳಿ, ಹೊಸಕೇರಿ ಮತ್ತು ಬನ್ನಿಗೋಳ ಗ್ರಾಮಗಳಲ್ಲಿ ನೀರಿನ ಪೈಪ್‌ಲೈನ್ ನಿರ್ಮಾಣ, ಸಿಸಿ ಚರಂಡಿ ನಿರ್ಮಾಣ, ಮತ್ತು ಹೈಮಾಸ್ಕ್ ದೀಪ ನಿರ್ಮಾಣ ಕಾಮಗಾರಿ ಮತ್ತು ಹೊಸಪೇಟೆ ತಾಲೂಕಿನ ಬುಕ್ಕಸಾಗರದಲ್ಲಿ ಹೈಮಾಸ್ಕ್ ದೀಪ ನಿರ್ಮಾಣಕ್ಕೆ ಗ್ರಾಮ ಪಂಚಾಯಿತ್ ಪಿಡಿಒಗಳು ಯೋಜನೆ ರೂಪಿಸಿದ್ದರು.

ಈ ಯೋಜನೆಗಳನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಗಳು ಯಾವುದೇ ಗ್ರಾಮಕ್ಕೂ ಹೈಮಾಸ್ಕ್ ದೀಪಗಳು ಬೇಡ., ಅವಶ್ಯವಿದ್ದರೆ ಹೆಚ್ಚುವರಿಯಾಗಿ ಇರುವ ಕಂಬಗಳಿಗೆ ದೀಪಗಳನ್ನು ಅಳವಡಿಸಿಕೊಳ್ಳಿ. ನೀರಿನ ಪೈಪ್‌ಲೈನ್ ಬದಲಿಗೆ ಪ್ರತಿ ಮನೆಯ ಮುಂದೆ ಕಟ್ಟೆ ನಿರ್ಮಾಣ ಮಾಡಿ 100 ಲೀಟರ್ ನೀರಿನ ಟ್ಯಾಂಕ್ ಕೂರಿಸಿ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೊಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಷಾ, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಶರಣಪ್ಪ ಮುದಗಲ್, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಎಸ್., ಡಿ.ಹೆಚ್.ಒ ಡಾ.ಶಂಕರ್ ನಾಯ್ಕ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಬಿ.ರಾಮಚಂದ್ರಪ್ಪ ಹಾಗೂ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.




## ಸ್ಟುಡೆಂಟ್ ಕಾಲಂ

### ಇಕೋಬ್ರಿಕ್ಸ್ ಬಳಸಿ ಪ್ಲಾಸ್ಟಿಕ್ ಮನೆ ನಿರ್ಮಿಸಿ



ಒಂದು ಗ್ರಾಮದಲ್ಲಿ ಮೂವರು ಗೆಳತಿಯರಿದ್ದರು. ಅವರ ಹೆಸರು ರಾಧಾ, ಲತಾ ಮತ್ತು ಸುಮಾ. ಅವರು ತುಂಬಾ ಒಗ್ಗಟ್ಟಾಗಿದ್ದರು ಮತ್ತು ತುಂಬಾನೇ ಚುರುಕಾಗಿ ಇದ್ದರು. ಒಂದು ದಿನ ಶಾಲೆಯನ್ನು ಮುಗಿಸಿಕೊಂಡು ಮನೆಗೆ ಬರುವಾಗ ಲತಾಳಲ್ಲಿ ಆಲೋಚನೆಯೊಂದು ಮೂಡಿತು. ಅವಳು ಅದನ್ನು ತನ್ನ ಗೆಳತಿಯರಿಗೆ ಹೇಳಿದಳು. 'ನಾವು ಎಲ್ಲರು ಕೂಡಿಕೊಂಡು ಒಂದು ದಿನದ ಪ್ರವಾಸ ಹೋಗೋಣವೇ?' ಎಂದು ಕೇಳಿದಳು. ಆಗ ರಾಧಾ 'ಸರಿ ಆಯ್ತು ಕಣೆ, ಹೋಗಿ ಬರೋಣ' ಎಂದಳು. ಅದಕ್ಕೆ ಎಲ್ಲರೂ ಒಪ್ಪಿದರೂ ಮತ್ತು ಅವರ ತಂದೆ ತಾಯಿಯ ಒಪ್ಪಿಗೆಯನ್ನು ತೆಗೆದುಕೊಂಡು ತಯಾರಾದರು. ಮಾರನೇ ದಿನ ಶಾಲೆಯಲ್ಲಿ ಲತಾ 'ಯಾವುದರಲ್ಲಿ ಹೋಗಬೇಕು?' ಎಂದು ಕೇಳಿದಳು. 'ನಮ್ಮ ದೊಡ್ಡಪ್ಪನ ಕಾರು ಇದೆ. ಅದರಲ್ಲಿ ಹೋಗೋಣ' ಎಂದಳು..... 'ಸರಿ ಆಯ್ತು' ಉಳಿದ ಇಬ್ಬರು ಒಪ್ಪಿಕೊಂಡರು. ರಾತ್ರಿ ಹೊರಡುವುದೆಂದು ತೀರ್ಮಾನಿಸಿದರು.

ಅವರೆಲ್ಲರಿಗೂ ಸಂಭ್ರಮವೋ ಸಂಭ್ರಮ. ಪ್ರವಾಸದ ಸಂದರ್ಭದಲ್ಲಿ ಸಮುದ್ರ ತೀರಕ್ಕೂ ಭೇಟಿ ಕೊಡುವ ಕಾರ್ಯಕ್ರಮ ಇತ್ತು. ಹಾಗಾಗಿ ಅವರ ಖುಷಿಗೆ ಪಾರವೇ ಇರಲಿಲ್ಲ. ಮಾರ್ಗ ಮಧ್ಯದಲ್ಲಿ ಹೋಗುವಾಗ ಒಂದೆರಡು ಊರುಗಳಲ್ಲಿ ನಿಂತು ಹೋಗಬೇಕಿರುವುದರಿಂದ ಸಮುದ್ರ ತೀರ ತಲುಪುವ ಹೊತ್ತಿಗೆ ಸಂಜೆ ಆಗುತ್ತದೆ ಎಂದು ದೊಡ್ಡಪ್ಪ ಹೇಳಿದರು. ಆದರೂ ಆ ಗೆಳತಿಯರಿಗೆ ಸಮುದ್ರದ ಧ್ಯಾನ. "ಬೀಚಲ್ಲಿ ಏನಿರುತ್ತೆ ಸುಮಾ?" ಎಂದು ರಾಧ ಕೇಳಿದಳು. 'ಅಷ್ಟು ಗೊತ್ತಿಲ್ವಾ? ಆಟ ಆಡಕ್ಕೆ ಬೇಕಾದಷ್ಟು ಮರಳು ಇರುತ್ತೆ. ಕಪ್ಪೆ ಚಿಪ್ಪಿ ಸಿಗುತ್ತೆ' ಎಂದಳು ಸುಮಾ. ಅವರು ಬೀಚ್ ಬಗ್ಗೆ ಮಾತನಾಡುತ್ತಾ ತಂದಿರುವ ತಿಂಡಿ ತಿನಿಸನ್ನು ತಿಂದು ಮುಗಿಸಿದರು.

ಅವರ ಪ್ರಯಾಣ ಮುಂದುವರೆದಿತ್ತು. ಅದೇ ಗುಂಗಿನಲ್ಲಿ ನಿದ್ದೆಗೆ ಜಾರಿದರು. 'ಬೀಚ್ ಬಂತು!' ಅಂತ ದೊಡ್ಡಪ್ಪ ಹೇಳಿದರು. ಆಗ ಅವರೆಲ್ಲ ಎಚ್ಚರಗೊಂಡು ಕಾರಿನಿಂದ ಕೆಳಗಿಳಿದರು. ಸಮುದ್ರದ ಕಡೆ ಓಡಿ ಹೋದರು. 'ಇಲ್ನೋಡು ಕಪ್ಪೆ ಚಿಪ್ಪು!' ಎಂದು ರಾಧಾ ಹೇಳಿದಳು. ಅಲ್ನೋಡು ಬೇರೆ ತರ ಕಪ್ಪೆ ಚಿಪ್ಪು ಎಂದು ಓಡಿದ ಲತಾಳಿಗೆ ಸಿಕ್ಕಿದ್ದು ಪ್ಲಾಸ್ಟಿಕ್ ಬಾಟಲಿಯ ಮುಚ್ಚಳ.

ಸ್ವಲ್ಪ ಮುಂದೆ ಹೋದರೆ ಅಲ್ಲಿ ಪ್ಲಾಸ್ಟಿಕ್ ಬಾಟಲಿಗಳ ರಾಶಿ ಬಿದ್ದಿತ್ತು. 'ಇಷ್ಟೊಂದು ಪ್ಲಾಸ್ಟಿಕ್ ಬಾಟಲಿ ಇಲ್ಲಿ ಯಾಕಿದೆ ದೊಡ್ಡಪ್ಪ?' ಎಂದು ಲತಾ ಕೇಳಿದಳು. 'ಪ್ರವಾಸಕ್ಕೆಂದು ಬಂದವರು ನೀರು, ಜ್ಯೂಸು ಕುಡಿದು ಬಿಸಾಡಿರಬೇಕು' ಎಂದು ದೊಡ್ಡಪ್ಪ ಹೇಳಿದರು. ಹಾಗೆ ಬೀಚಿನಿಂದ ಸ್ವಲ್ಪ ಮುಂದೆ ಅವರಿಗೆ ರಸ್ತೆ ಬದಿಯಲ್ಲಿ ಸಾಲು ಸಾಲು ಜೋಪಡಿಗಳು ಕಂಡವು. 'ಇಂತಹ ಮನೆಯಲ್ಲಿ ಇರೋದು ಕಷ್ಟ ಅಲ್ವಾ! ಮಳೆಗಾಲದಲ್ಲಿ ನೀರು ಮನೆಯೊಳಕ್ಕೆ ಬಂದು ಬಿಡುತ್ತೆ!' ಎಂದಳು ರಾಧ. ಹೌದು ಎಂದಳು ಲತಾ.

ಲತಳ ತಲೆಯಲ್ಲಿ ಪ್ಲಾಸ್ಟಿಕ್ ಬಾಟಲ್‌ಗಳ ರಾಶಿಯೇ ಇತ್ತು. 'ಆ ಬಾಟಲ್‌ಗಳನ್ನೆಲ್ಲ ನನ್ನ ಬಿಲ್ಡಿಂಗ್ ಬ್ಲಾಕ್ಸ್ ಮಾಡಿಕೊಂಡರೆ ಇಷ್ಟೊಂದು ಮನೆ ಕಟ್ಟಬಹುದು!' ಎಂದಳು ಲತಾ. ಇವಳ ಮಾತು ಕೇಳುತ್ತಿದ್ದ ಸುಮಾಳಿಗೆ ನಗು ಬಂತು. ಬೇಗ ದೊಡ್ಡವಳಾಗಿ ಅಂತಹ ಮನೆಗಳನ್ನೇ ಕಟ್ಟು. ಜೋಪಡಿಯಲ್ಲಿರುವವರಿಗೆ ಮನೆಯೂ ಸಿಗುತ್ತೆ, ಬೀಚಿನ ಕಸವೂ ಹೋಗುತ್ತೆ' ಎಂದಳು ಸುಮಾ. ಹೀಗೆ ಮೂವರೂ ಬೀಚ್‌ನಲ್ಲಿ ಸಂತಸದಿಂದ ಆಟವಾಡಿ ಊರನ್ನು ಸೇರಿದರು. ಮರು ಸಂಸ್ಕರಣೆ ಮಾಡಲಾಗದ ಕಸವನ್ನು ಪ್ಲಾಸ್ಟಿಕ್ ಬಾಟಲಿಗಳ ಒಳಗೆ ತುಂಬಿಸಿ, ಅವುಗಳನ್ನೇ ಇಟ್ಟಿಗೆಗಳಂತೆ ಬಳಸಬಹುದು. ಇದಕ್ಕೆ 'ಇಕೋಬ್ರಿಕ್' ಎಂದು ಕರೆಯುತ್ತಾರೆ ಎಂಬ ಪರಿಸರ ಪ್ರಜ್ಞೆಯನ್ನು ಅವರು ಎಲ್ಲೆಡೆ ತಿಳಿಸಿದರು.

– **ಎಂ.ಎಂ.ಅನುಪಮ.** 10ನೇ ತರಗತಿ. ಸರ್ಕಾರಿ ಪ್ರೌಢಶಾಲೆ. ಬಸರಕೋಡು. ಹ.ಬೊ.ಹಳ್ಳಿ(ತಾ)

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಪ್ರಕೃತಿಯ ಅಳಿವು-ಉಳಿವು ನಮ್ಮ ಅಳಿವು-ಉಳಿವು

ನಮಗಿರುವ ಸರಾಸರಿ ಬದುಕಿನಲ್ಲಿ ಜಗತ್ತನ್ನು ಅಥವಾ ಪ್ರಕೃತಿಯ ವೈಚಿತ್ರ್ಯವನ್ನು ಅರಿಯುವುದಕ್ಕೆ ಸಾಕಾಗುವುದಿಲ್ಲ. ಎಷ್ಟೊಂದು ಬದುಕು ಬೇಕಾಗಬಹುದು! ಸೃಷ್ಟಿಯ ಚೆಲುವು ಬದುಕಿಗೆ ಪ್ರೇರಣೆ–ಪೋಷಣೆ ನೀಡುತ್ತದೆ. ನಿಸರ್ಗದ ಅನುಪಮವಾದ ರಮ್ಯನೋಟ ಮೈಮನಗಳಿಗೆ ಮುದ ನೀಡುತ್ತದೆ. ಅದನ್ನು ಪೂಜ್ಯಭಾವದಿಂದ ಆರಾಧಿಸುತ್ತಾ, ಅನುಭವಿಸುತ್ತಾ, ಆನಂದಿಸುತ್ತಾ ಕಾಲ ಕಳೆಯಬೇಕಷ್ಟೆ. ಪ್ರಕೃತಿಯ ಮಡಿಲಲ್ಲಿರುವ ನಾವು ಅದರ ವಿರುದ್ಧ ಹೋಗುವುದು ಸರಿಯಲ್ಲ. ನಮ್ಮ ಸ್ವಾರ್ಥದ ಅಂದಚೆಂದಕ್ಕಾಗಿ, ವೈಭೋಗದ ಜೀವನಕ್ಕಾಗಿ ಮರಗಳ ಮಾರಣ ಹೋಮ ಹಾಗೂ ಬೆಟ್ಟಗುಡ್ಡಗಳ ನೆಲಸಮ ಮಾಡುತ್ತಾ, ಉಗುರಿನಿಂದ ತೆಗೆದು ಹಾಕುವ ಸಂಗತಿಗಳಿಗೆ ಕೊಡಲಿಯನ್ನು ಬಳಸುತ್ತಾ ಸಾಗಿದ್ದೇವೆ. ಸಾಧ್ಯವಾದಷ್ಟು ಇರುವುದರಲ್ಲಿಯೇ ಹೊಂದಾಣಿಕೆ ಮಾಡಿಕೊಳ್ಳುವ ಸದ್ಗುಣ ಬೆಳೆಸಿಕೊಳ್ಳುವುದು ಮುಖ್ಯ. ನೂರಾರು ವರ್ಷ ಬಾಳುವ ಮರಕ್ಕಿಂತ ಕೆಲವೇ ವರ್ಷ ಬಾಳುವ ಮನುಷ್ಯ ತನ್ನ ಬೌದ್ಧಿಕತೆಯಿಂದ ಎಂದಿಗೂ ಹಿರಿಯನಾಗಲಾರ.

ಪ್ರತಿಯೊಬ್ಬರಿಗೆ ಇರುವುತನಕ ಕೈಗೊಂದು ಕಾಯಕ, ನೆರಳಿಗೊಂದ ಸೂರು, ಊಟ–ಬಟ್ಟೆ ಇತ್ಯಾದಿಗಳು ಸಾಕಾಗುತ್ತವೆ. ಇಷ್ಟಕ್ಕೆ ತೃಪ್ತಿಪಟ್ಟುಕೊಳ್ಳಬೇಕೇ ಹೊರತು ಇನ್ನಷ್ಟು ಮತ್ತಷ್ಟು ಗಳಿಸುತ್ತಾ, ಇತರರಿಗಿಂತ ಅಧಿಕವಾಗಿರಬೇಕೆಂಬ ನಾಗಾಲೋಟದಲ್ಲಿ ಓಡುತ್ತಾ, ಹುಚ್ಚುತನಕ್ಕೆ ಬಲಿಯಾಗುವುದು ಎಷ್ಟರಮಟ್ಟಿಗೆ ಸರಿ? ಆದರೂ ಇಂತಹ ಮನಸ್ಥಿತಿಯಿಂದ ಪರೋಕ್ಷವಾಗಿ ಪ್ರಕೃತಿಯ ನಾಶಕ್ಕೆ ಕಾರಣವಾಗಿದ್ದೇವೆ. ಅಲ್ಲದೆ ನಿತ್ಯವೂ ಕಣ್ಣೆದುರಿನಲ್ಲಿ ಸಾವುಗಳಾಗುತ್ತಿದ್ದರೂ (ನಾವೂ ಕ್ಯೂನಲ್ಲಿರುವ ಸತ್ಯ ಮರೆತು) ತಾನು ಮಾತ್ರ ಶಾಶ್ವತವೆಂಬ ಭ್ರಮೆಯಲ್ಲಿ ಮುಳುಗಿ ಏನೆಲ್ಲಾ ಸಂಪಾದನೆಯಲ್ಲಿ ತೊಡಗಿ ನಿಸರ್ಗ ಕಲುಷಿತಗೊಳಿಸುತ್ತಿರುವುದು ವಿಪರ್ಯಾಸ. ನಿನ್ನೆ ಇದ್ದವರು ಇಂದಿಲ್ಲ. ಇಂದಿದ್ದವರು ನಾಳೆ ಇಲ್ಲ. ನಾವು ಬರುವುದಕ್ಕೂ ಮೊದಲೂ ಇದ್ದ ಪ್ರಕೃತಿ ನಮ್ಮ ನಂತರವೂ ಇರುತ್ತದೆ. ಇದನ್ನು ನಾಶ ಮಾಡುವ ಹಕ್ಕು ಯಾರಿಗೂ ಇಲ್ಲ. ನಾವಷ್ಟೇ ಬದುಕುವುದಲ್ಲ ಮುಂದಿನವರಿಗೂ ಉಳಿಸಿ ಬೆಳೆಸಿ ಹೋಗಬೇಕಾಗಿರುವುದು ನಮ್ಮ ಕರ್ತವ್ಯ.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper

ಪ್ರಕೃತಿಮಾಲಿನ್ಯ ಮುಕ್ತವಾಗಿದ್ದರೆ ಪ್ರಾಣವಾಯುವಿನಲ್ಲಿ ಸಮತೋಲನವನ್ನು ಕಾಯ್ದುಕೊಳ್ಳಬಹುದು. ಆದರೆ ಶುದ್ಧವಾದ ಗಾಳಿ, ನೀರು, ಆಹಾರ ಪದಾರ್ಥಗಳನ್ನು ಎಷ್ಟು ಸಾಧ್ಯವೋ ಅಷ್ಟು ಬಳಕೆ ಮಾಡದೇ ಹಾಳುಗೆಡುವುದರಲ್ಲಿ ಮೈಮರೆತ್ತಿದ್ದೇವೆ. ಜೇಡರ ಹುಳು ತಾನೇ ನಿರ್ಮಿಸಿದ ಬಲೆಯೊಳಗೆ ಸಿಕ್ಕಿಹಾಕಿಕೊಂಡು ಹೊರಬರಲಾರದೇ



ತನ್ನ ಪ್ರಾಣ ತಾನೇ ಕಳೆದುಕೊಳ್ಳುವಂತೆ, ಕೆಲವು ಜನ ಭ್ರಷ್ಟರು ತಾವು ಅನೈತಿಕ ಮಾರ್ಗದಲ್ಲಿ ಪ್ರಕೃತಿಯನ್ನು ಕೊಳ್ಳೆ ಹೊಡೆದು, ದಿನದಿನಕ್ಕೂ ಪ್ರಕೃತಿಯನ್ನು ವಿಷಮಯಗೊಳಿಸಿ ಆ ವಿಷವನ್ನು ಎಲ್ಲರಿಗೂ ಉಣಬಡಿಸುತ್ತಿದ್ದಾರೆ. ಇದರಿಂದ ಅಮಾಯಕರು ಆಪತ್ತಿಗೊಳಗಾಗಿ ಆಯಾಸಪಡುತ್ತಿರುವುದುಂಟು.

"ವಿಶ್ವದೊಳಗೆಲ್ಲ ನೀನೇ ದೇವಾ, ವಿಶ್ವಭರಿತನು ನೀನೇ ದೇವಾ, ವಿಶ್ವರೂಪನು ನೀನೇ ದೇವಾ" ಎಂದು ಷಣ್ಮುಖಶಿವಯೋಗಿ ಹೇಳುವಂತೆ, ಪ್ರಕೃತಿಯಲ್ಲಿ ಪರಮಾತ್ಮನನ್ನು ಕಾಣುವ ದಿವ್ಯದೃಷ್ಟಿಯ ವೈಚಾರಿಕತೆ ಬೆಳೆಸಿಕೊಂಡಾಗ ಮಾತ್ರ ಅದನ್ನು ರಕ್ಷಿಸಲು ಸಾಧ್ಯ. ಬಸವಣ್ಣನವರು "ಎತ್ತೆತ್ತ ನೋಡಿದತ್ತತ್ತ ನೀನೇ ದೇವಾ, ಸಕಲ ವಿಸ್ತಾರದ ರೂಹು ನೀನೇ ದೇವಾ"ಎಂದಿದ್ದಾರೆ. "ವನವೆಲ್ಲಾ ನೀವೇ ವನದೊಳಗಣ ದೇವ ತರುವೆಲ್ಲಾ ನೀವೇ ತರುವಿನೊಳಗಾಡುವ ಖಗ–ಮೃಗವೆಲ್ಲ ನೀವೆ" ಎಂದು ಅಕ್ಕ ಮಹಾದೇವಿಯೂ ಹೇಳಿದ್ದಾಳೆ. ಹೀಗೆ ನಮ್ಮ ಶರಣರು ನದಿ–ಬೆಟ್ಟ, ಗಿಡ–ಮರ, ಪಶು–ಪಕ್ಷಿ ಎಲ್ಲದರಲ್ಲಿ ದೇವತ್ವವನ್ನು ಕಂಡು ಆಧ್ಯಾತ್ಮಿಕ ಪರಿಸರ ನಿರ್ಮಿಸಿದ್ದಾರೆ.

ಸರ್ವವೂ ದೇವತ್ವ ಹೊಂದಿರುವುದರಿಂದ ಪ್ರಕೃತಿಯ ಮೇಲೆ ನಿರಂತರ ಅತ್ಯಾಚಾರ ಸಲ್ಲದು. ಹಾಗೆಯೇ ಮನುಷ್ಯನು ಕೂಡ ಪ್ರಕೃತಿಯ ಅಂಶವಾಗಿರುವುದರಿಂದ ಒಬ್ಬರಿಂದೊಬ್ಬರಲ್ಲಿ ಪ್ರೀತಿಯ ಭಾವನೆಗಳು ಹರಿದಾಡಬೇಕು. ಪ್ರಕೃತಿಯ ನಾಶವೆಂದರೆ ನಮ್ಮ ನಾಶವೆಂಬ ಮಹಾ ಅರಿವು ಪ್ರತಿಯೊಬ್ಬರಲ್ಲಿ ಮೂಡುವುದು ಜರೂರಾಗಬೇಕು.

# ಹಾಸ್ಟೆಲ್ ಜೀವನದ ಅನುಭವಗಳು

■ **ಚೇತನ ಭಾರ್ಗವ ಬೆಂಗಳೂರ**



ಜೀವನದ ಹಲವು ಮಜಲುಗಳಲ್ಲಿ ಹಾಸ್ಟೆಲ್ ಜೀವನವು ಸುಂದರವಾದ ಮರೆಯಲಾಗದ ದಿನಗಳು. ಬೆಚ್ಚನೆಯ ಸೂರಿನಲ್ಲಿ ಅಪ್ಪ–ಅಮ್ಮನ ಮಡಿಲಿನಲ್ಲಿ ಹಾಯಾಗಿ ಇಪ್ಪತ್ತೆರಡು ವರ್ಷಗಳ ಕಾಲ ಇದ್ದ ನನಗೆ ಸ್ನಾತಕೋತ್ತರ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಹಾಸ್ಟೆಲ್ ನಲ್ಲಿ ತಂಗಬೇಕಾಯಿತು. ಅಪ್ಪ ನನ್ನನ್ನು ಮೊದಲ ಬಾರಿಗೆ ಹಾಸ್ಟೆಲ್ ನಲ್ಲಿ ಬಿಟ್ಟು ಹೋಗುವಾಗ ಇಬ್ಬರ ಕಣ್ಣಲ್ಲೂ ಧಾರಾಕಾರವಾದ ಮಳೆ ಸುರಿಯಲಾರಂಭಿಸಿತು. ನಂತರ ಅಪ್ಪ ಗಟ್ಟಿ ಮನಸ್ಸು ಮಾಡಿ ನನಗೆ ಧೈರ್ಯ ಹೇಳಿ ಬಿಟ್ಟು ಹೋದರು. ಮೊದಮೊದಲು ಹಾಸ್ಟೆಲ್ ನ ಪರಿಸರಕ್ಕೆ ಹೇಗೆ ನಾನು ಹೊಂದಿಕೊಳ್ಳುತ್ತೇನೋ ಎಂದೆನಿಸಿ ಭಯವಾಗುತ್ತಿತ್ತು. ಒಂದು ಹೊಸ ಪ್ರಪಂಚಕ್ಕೆ ಕಾಲಿಟ್ಟ ಅನುಭವವಾಗುತ್ತಿತ್ತು. ನಂತರದ ದಿನಗಳಲ್ಲಿ ಅದೇ ನನ್ನ ಮನೆ ಅನಿಸತೊಡಗಿತು.

ಪ್ರಾರಂಭದ ದಿನಗಳಲ್ಲಿ ಹಾಸ್ಟೆಲ್ ಜೀವನಕ್ಕೆ ಹೊಂದಿಕೊಳ್ಳಲು ಕಷ್ಟವಾದರೂ ಅಲ್ಲಿ ಸಿಕ್ಕ ಸ್ನೇಹಿತರು ಹಾಗೂ ನನ್ನ ಸೀನಿಯರ್ ವಿದ್ಯಾರ್ಥಿಗಳ ಪ್ರೀತಿ ಮಮತೆಯಿಂದಾಗಿ ಎಲ್ಲರೊಡನೆ ಹೊಸ ಸ್ನೇಹದ ಬೆಸುಗೆ ಬೆಸೆಯಿತು. ಕ್ರಮೇಣ ಸೀನಿಯರ್ ವಿದ್ಯಾರ್ಥಿಗಳ ಮಾರ್ಗದರ್ಶನ ಮತ್ತು ಸ್ನೇಹಿತರ ಪ್ರೀತಿ ಕಾಳಜಿಯಿಂದಾಗಿ ಹಾಸ್ಟೆಲ್ ನಮ್ಮ ಕುಟುಂಬದಂತಾಯಿತು. ಹಬ್ಬಗಳನ್ನು ಎಲ್ಲರೂ ಒಟ್ಟಾಗಿ ಸಂಭ್ರಮಿಸುತಿದ್ದೆವು. ಸ್ನೇಹಿತರ ಹುಟ್ಟು ಹಬ್ಬಗಳನ್ನು ಹಾಸ್ಟೆಲ್ ನಲ್ಲಿ ಆಚರಿಸುತ್ತಿದ್ದೆವು. ನಮ್ಮ ಹಾಸ್ಟೆಲ್ ನಲ್ಲಿ ಊಟ ತಿಂಡಿ ಚೆನ್ನಾಗಿ ಇರುತ್ತಿತ್ತು ಹಾಗೂ ವಾರ್ಡನ್ ಕೂಡ ನಮ್ಮನ್ನು ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು.

ಊಟದ ಸಮಯದಲ್ಲಿ ಸ್ನೇಹಿತರೆಲ್ಲರೂ ಒಟ್ಟಾಗಿ ಡೈನಿಂಗ್ ಹಾಲ್ ಗೆ ಹೋಗಿ ಊಟ



ಮಾಡುತ್ತಿದ್ದೆವು. ಬೆಳ್ಳುಳ್ಳಿ ಉಪಯೋಗಿಸದ ಶುದ್ಧ ಸಸ್ಯಹಾರಿಯಾದ ನನಗೆ, ನನ್ನ ಸ್ನೇಹಿತೆಯ ಸ್ನೇಹಿತೆ ಒಬ್ಬಳು ಮನೆಯಿಂದ ತಂದಿದ್ದ ಬದನೆಕಾಯಿ ಸಾಂಬಾರನ್ನು ಹಾಕಲು ಬಂದಳು. ನನಗೆ ಆ ಸಾಂಬಾರ್ ನ ವಾಸನೆ ನೋಡಿ ಅದು ಸಸ್ಯಹಾರ ಅಲ್ಲವೇನೋ ಎಂದು ಅನುಮಾನವಾಗಿ ತಟ್ಟೆಯನ್ನು ಅಲ್ಲೇ ಇಟ್ಟು ನನ್ನ ರೂಮಿಗೆ ಓಡಿ ಹೋಗಿಬಿಟ್ಟಿದೆ. ನಂತರ ನನ್ನ ಸ್ನೇಹಿತೆ ನನ್ನ ಬಳಿ ಬಂದು "ನೀನು ಅಲ್ಲಿಂದ ಏಕೆ ಹಾಗೆ ಓಡಿ ಹೋದೆ" ಎಂದು ಪ್ರಶ್ನಿಸಿದಾಗ ನನ್ನ ಮನದಲ್ಲಿ ಮೂಡಿದ್ದ ಸಂಶಯವನ್ನು ಹೇಳಿದೆ. ಅವಳು ನನ್ನ ತಲೆಯನ್ನು ಮಟಕುತ್ತಾ, "ಅವಳು ಕೂಡ ನಿನ್ನ ಹಾಗೆ ಶುದ್ಧ ಸಸ್ಯಹಾರಿ, ಅದು ಬೆಳ್ಳುಳ್ಳಿಯ ವಾಸನೆ ಅಲ್ಲದೇ ಹಾಸ್ಟೆಲ್ ಒಳಗೆ ಸಸ್ಯಹಾರ ಪದಾರ್ಥವನ್ನು ಮಾತ್ರ ತರಲು ಅನುಮತಿ ಇರುವುದು" ಎಂದು ಹೇಳಿ ನಗಾಡಲು ಶುರು ಮಾಡಿದಳು. ನನ್ನ ಪೆದ್ದುತನಕೆ ನಾಚಿಕೆಯಿಂದ ತಲೆತಗ್ಗಿಸಿ, ನಂತರ ತಡಮಾಡದೆ ಅವಳ ಸ್ನೇಹಿತೆಯ ಬಳಿ ಹೋಗಿ "ನನಗೆ ಮನೆಯಿಂದ ಅಮ್ಮನ ಫೋನು ಬಂದಿತ್ತು ಅದಕ್ಕೆ ಅಲ್ಲಿಂದ ಎದ್ದು ಹೋಗಿದ್ದು ತಪ್ಪು ತಿಳಿಯಬೇಡ" ಎಂದು ಹೇಳಿ ತೇಪೆ ಹಚ್ಚಿದೆ. ಆ ಕ್ಷಣವನ್ನು ನನ್ನ ಜೀವನದಲ್ಲಿ ಎಂದೂ ಮರೆಯಲು ಸಾಧ್ಯವಿಲ್ಲ.

ನಾನು ಎಂ.ಕಾಂ. ನ ಕೊನೆಯ ಸೆಮಿಸ್ಟರ್ ನಲ್ಲಿ ಓದುತ್ತಿದ್ದಾಗ ನನಗೆ ಮದುವೆ ಗೊತ್ತಾಗಿತ್ತು (ಫಿಕ್ಸ್ ಆಗಿತ್ತು) ನನ್ನನ್ನು ಮದುವೆಯಾಗುವ ಹುಡುಗ ಜರ್ಮನಿಯಲ್ಲಿ ಕೆಲಸ ಮಾಡುತ್ತಿದ್ದರು ಅಲ್ಲಿಗೂ ಇಲ್ಲಿಗೂ ನಾಲ್ಕು ಗಂಟೆ ವ್ಯತ್ಯಾಸವಿದ್ದರಿಂದ ಪ್ರತಿ ದಿನ ರಾತ್ರಿ ನನಗೆ ಫೋನ್ ಬರುತ್ತಿತ್ತು. ನನ್ನ ಫೋನ್ ರಿಂಗ್ ಆದ ಕೂಡಲೇ ಹಾಸ್ಟೆಲ್ ನ ಗೆಳತಿಯರೆಲ್ಲರೂ ಸೇರಿಕೊಂಡು ನನ್ನನ್ನು ರೇಗಿಸಿ ರೇಗಿಸಿ ಕಾಡಿಸುತ್ತಿದ್ದರು. ಇಂತಹ ಅನೇಕ ಸುಮಧುರ ಸಿಹಿ ಕ್ಷಣಗಳನ್ನು ನನಗೆ ಹಾಸ್ಟೆಲ್ ಜೀವನ ತಂದು ಕೊಟ್ಟಿದೆ.

ಗೆಳತಿಯರ ಜೊತೆಗಿನ ಮುಗಿಯದ ಮಾತುಗಳು, ಪರೀಕ್ಷೆಗೆ ಓದಲು ಪುಸ್ತಕವನ್ನು ತೆರೆದಿಟ್ಟುಕೊಂಡು ಹರಟುತ್ತಿದ್ದ ಪರಿ, ತರಲೆ ತುಂಟಾಟಗಳು ಎಲ್ಲವೂ ಹಾಸ್ಟೆಲ್ ಜೀವನದ ಮರೆಯಲಾಗದ ಸುಂದರ ನೆನಪುಗಳು. ಹಾಸ್ಟೆಲ್ ಜೀವನವು ನನಗೆ ಅನೇಕ ಪ್ರೌಢ ವಿಷಯಗಳ ಬಗೆಗಿನ ಅರಿವನ್ನು ವಿಸ್ತರಿಸಿದೆ. ನನ್ನದೇ ಆದ ಸೀಮಿತ ಚೌಕಟ್ಟಿನಲ್ಲಿ ಬದುಕಿಕೊಂಡು ಬಂದಿದ್ದ ನನಗೆ ಅದರಾಚೆಗಿನ ಜೀವನವನ್ನು ಧನಾತ್ಮಕವಾಗಿ ಪರಿಚಯ ಮಾಡಿಕೊಟ್ಟಿದೆ.

ನಮ್ಮ ಜೀವನದ ಪಯಣ ಚಲಿಸುತ್ತಿರುವ ಬಸ್ಸು ಇದ್ದಂತೆ. ನಮ್ಮ ನಿಲ್ದಾಣ ಬಂದ ಕೂಡಲೇ ನಾವು ಇಳಿಯಲೇಬೇಕು. ಹಾಗೆಯೇ ಯಾರನ್ನು ನಾವು ಎಷ್ಟು ಹಚ್ಚಿಕೊಂಡಿದ್ದರೂ ನಮ್ಮಲ್ಲಿ ಎಂತಹ ಸ್ನೇಹ ಸಂಬಂಧವಿದ್ದರೂ, ಅಗಲಿಕೆ ಅನಿವಾರ್ಯ. ಸುಮಧುರವಾದ ನೆನಪಿನ ಬುತ್ತಿಯನ್ನು ಹೊತ್ತು ಕೊಂಡು ಭಾರವಾದ ಮನಸ್ಸಿನೊಂದಿಗೆ ಕಣ್ಣಿನಲ್ಲಿ ನೀರನ್ನು ತುಂಬಿಕೊಂಡು ಹಾಸ್ಟೆಲ್ ಗೆ ವಿದಾಯ ಹೇಳಿ ಬಾಳಿನ ಮುಂದಿನ ಪಯಣದತ್ತ ಹೆಜ್ಜೆ ಹಾಕಲೇಬೇಕು.

ಒಂದು ಸುಮಧುರ ಭೇಟಿಯ ಹಿಂದೆಯೇ ವಿದಾಯ ಜೊತೆಗೇ ಇರುತ್ತದೆ. ಬದುಕಿನಲ್ಲಿ ಯಾವ ಕ್ಷಣಗಳೂ ಶಾಶ್ವತವಲ್ಲ, ಸಮಯ ಸರಿಯುತ್ತಲೇ ಇರುತ್ತದೆ ಆದರೆ ನಾವು ಆ ಕ್ಷಣಗಳನ್ನು ಕಳೆಯುವ ರೀತಿ, ಅದು ನಮ್ಮ ಮನಸ್ಸಿನಲ್ಲಿ ಉಳಿಸುವ ಛಾಪು ಎಲ್ಲವೂ ನಮ್ಮ ನೆನಪಾಗಿ ಉಳಿದುಬಿಡುತ್ತದೆ. ಹಾಗೆಯೇ ಹಾಸ್ಟೆಲ್ ಜೀವನದ ಪುಟಗಳನ್ನು ಮತ್ತೊಮ್ಮೆ ತಿರುವಿಹಾಕೋಣ ಎಂದೆನಿಸುತ್ತಲೇ ಇರುತ್ತದೆ.

## ಕವಿ ಮನಸು

### ಜೋಳದರಾಶಿ ಗುಡ್ಡ



ಸುತ್ತುವರೆದ ಹಸಿರು ಗುಡ್ಡಗಳಿದ್ದರೂ
ಅದುವೇ ನಗರಕ್ಕೊಂದು ಮುಕುಟಪ್ರಾಯ
ಹೆಸರೇ ಒಂದು ಅಪ್ಯಾಯತೆಯ
ಗಾಂಭೀರ್ಯ
ಟ್ರೆಕ್ಕಿಂಗ್ ಪ್ರಿಯರ ನೆಚ್ಚಿನ ತಾಣ,
ಹಲವು ಪ್ರಾಣಿಗಳ ಆಶ್ರಯತಾಣ
ಜಾನುವಾರುಗಳಿಗೆ ಹುಲ್ಲುಗಾವಲು
ಹಕ್ಕಿ ಪಕ್ಷಿಗಳ ನಿನಾದದಲಿ ಮಿಂದು
ಕಣ್ಣರಳಿಸಿ ನೋಡುತ್ತಿದ್ದ ಪಯಣಿಗರ
ಜೋಳದರಾಶಿಗುಡ್ಡ ,
ಈಗೀಗ ಅರಿವಿರದೇ ಮರೆಯಾಗುತ್ತಿದೆ.
ಅಭಿವೃದ್ಧಿಯ ಹೆಸರೋ
ಮತ್ತೊಂದು ಕಾರಣವೋ ಬಲ್ಲವರಾರು !?
ಆದರೂ ತಿಳಿಯದಂತೆ ಮರೆಯಾಗುತಿದೆ
ಜೋಳದರಾಶಿ!

– ಲೀಲಾವತಿ ವಿಜಯಕುಮಾರ್

### ಅಂತರಾತ್ಮ

ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಸಹಜ
ಕರ್ಮದ ಫಲವೇ ಜೀವನ ಮನುಜ
ಮಿಡಿಯುವ ಮನಕೆ ಭಾವವೇ ಹರಿವು
ಮಾತಿನ ಬಾಣಕೆ ಮೌನವೇ ತರವು

ದುಃಖದ ಕ್ಷಣಕೆ ಕಣ್ಣೀರಿನ ಹನಿಯು
ಸಂತಸ ಹೊಂದಲು ನಗುವಿನ ಜತೆಯು
ರಾಗ ದ್ವೇಷಕೆ ಮೋಹವೇ ಕಾರಣ
ಬಾಳಿನ ಬೆಳಕಿಗೆ ಪ್ರೀತಿಯೇ ಹೂರಣ

ಕೋಪ ತಾಪಕೆ ಮೂಲವೇ ಜಂಭ
ಮಾನವ ಜನ್ಮದಿ ಬಯಕೆಗಳೇ ತುಂಬಾ
ಪ್ರತಿಕ್ರಿಯೆ ಮೀರುವ ಪ್ರಕ್ರಿಯೆ ಭಾವನೆ
ಅಂತರಾತ್ಮದ ಅರಿವೇ ನಿಜವಾದ ಸಾಧನೆ

– ಚೇತನ ಭಾರ್ಗವ ಬೆಂಗಳೂರು




# ಮಕ್ಕಳೇ ದೇಶದ ಸಂಪತ್ತು, ಸದೃಢವಾಗಿಸೋಣ

## ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್ ಹೇಳಿಕೆ | ಪೌಷ್ಠಿಕತೆ ಪ್ರತಿಯೊಬ್ಬ ಮಗುವಿನ ಪ್ರಾಥಮಿಕ ಹಕ್ಕು | ಪೋಷಣ್ ಅಭಿಯಾನ

■ ಹಂಪಿ ಟೈಮ್ಸ್ ಕೊಪ್ಪಳ

ಮಕ್ಕಳು ದೇಶದ ಸಂಪತ್ತು ಆಗಿದ್ದು, ಮಕ್ಕಳನ್ನು ಪೌಷ್ಠಿಕರನ್ನಾಗಿ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ಹೇಳಿದರು.

ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಬಳ್ಳಾರಿಯ ಕೇಂದ್ರ ಸಂವಹನ ಇಲಾಖೆ, ಕೊಪ್ಪಳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರದಲ್ಲಿ ಗುರುವಾರ ನಗರದ ವಾಲ್ಮೀಕಿ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಪೋಷಣ್ ಅಭಿಯಾನ ಕೇಂದ್ರ ಸರ್ಕಾರ ಯೋಜನೆಗಳ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪೌಷ್ಠಿಕತೆ ಪ್ರತಿಯೊಬ್ಬ ಮಗುವಿನ ಪ್ರಾಥಮಿಕ ಹಕ್ಕಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಕ್ಕಳ ಪೌಷ್ಠಿಕತೆಗಾಗಿ ವಿವಿಧ ವಿಶೇಷ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ಜಾರಿಗೊಳಿಸಿವೆ. ಪೋಷಣ್ ಅಭಿಯಾನದ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಿ ಕಾರ್ಯಕ್ರಮವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ತಾಯಿ ಮತ್ತು ಗರ್ಭಿಣಿಯರು ಪ್ರಾರಂಭದಲ್ಲಿಯೇ ವಿಶೇಷ ಪೌಷ್ಠಿಕ ಆಹಾರವನ್ನು ಪಡೆದು ಆರೋಗ್ಯವಂತ ಮಗುವನ್ನು ಉತ್ತಮ ಸಮಾಜ ನಿರ್ಮಾಣಕ್ಕೆ ಕೊಡುಗೆಯಾಗಿ ನೀಡಬೇಕೆಂದು ತಿಳಿಸಿದರು.



ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಬಳ್ಳಾರಿಯ ಕೇಂದ್ರ ಸಂವಹನ ಇಲಾಖೆಯ ಅಧಿಕಾರಿ ರಾಮಕೃಷ್ಣ ಎನ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಪಿ.ಎಮ್. ಸೂರ್ಯ ಘರ್ ಯೋಜನೆ, ವಿಕಸಿತ ಭಾರತ, ಪಿ.ಎಮ್ ದೂರದರ್ಶಿತ್ವ–2047ರ ಕುರಿತು ಫಲಾನುಭವಿಗಳಿಗೆ ಮಾಹಿತಿ ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪರಶುರಾಮ ವೈ ಶೆಟ್ಟಪ್ಪನವರ್ ಅವರು ಮತನಾಡಿ, ಆಶಾ ಕಾರ್ಯಕರ್ತೆಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿನ ಮಹಿಳೆಯರು ಗರ್ಭಿಣಿ ಇರುವಾಗ ಮಗುವಿನ ಆರೋಗ್ಯ ರಕ್ಷಣೆ ಬಗ್ಗೆ ಕಾಳಜಿ ವಹಿಸಿ ಅವರಿಗೆ ಪೌಷ್ಟಿಕ ಶಿಬಿರ ಹಾಗೂ ತಾಯಂದಿರ ಸಭೆಗಳಲ್ಲಿ ಪಾಲ್ಗೊಳ್ಳಲು ಅರಿವು ಮೂಡಿಸಬೇಕು. ಉತ್ತಮ ಸಮಾಜದ ವ್ಯಕ್ತಿಗಳನ್ನು ನಿರ್ಮಾಣ ಮಾಡುವ ಸಂಸ್ಥೆ ಅಂಗನವಾಡಿ ಕೇಂದ್ರಗಳಾಗಿರುತ್ತವೆ ಎಂದು ಕಾರ್ಯಕರ್ತೆಯರ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ಪೂಜಾರ ಅವರು ಮಾತನಾಡಿ, ವಿವಿಧ ಇಲಾಖೆಯ ಸಹಯೋಗದೊಂದಿಗೆ ಪೋಷಣ್ ಅಭಿಯಾನ ಕಾರ್ಯಕ್ರಮಗಳಿಂದ ಅನಿಮೀಯಾ ಮುಕ್ತ ಭಾರತ ಬಗ್ಗೆ, ಸ್ವಚ್ಚತೆ ಬಗ್ಗೆ, ಪೌಷ್ಠಿಕತೆಯ ಬಗ್ಗೆ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮಾಹಿತಿ ನೀಡುವಲ್ಲಿ ಪ್ರಮುಖ ಪಾತ್ರವಹಿಸುವರು ಎಂದು ಹೇಳಿದರು.

ಸಾಹಿತಿ ಹಾಗೂ ಗಾಯಕಿ ಅನ್ನಪೂರ್ಣ ಮನ್ನಾಪುರ ಅವರು ಬಾಲ್ಯವಿಹಾರ ತಡೆ ಹಾಗೂ ಪೌಷ್ಠಿಕ ಆಹಾರ ಕುರಿತು ಜಾಗೃತಿ ಗೀತೆಗಳನ್ನು ಹಾಡಿದರು.

**ವಿವಿಧ ಸ್ಪರ್ಧೆಗಳು :** ಕಾರ್ಯಕ್ರಮದ ಅಂಗವಾಗಿ ರಂಗೋಲಿ ಸ್ಪರ್ಧೆ, ಪೌಷ್ಟಿಕ ಆಹಾರ ಸ್ಪರ್ಧೆ, ಹಣ್ಣು ಮತ್ತು ತರಕಾರಿಗಳಿಂದ ಕಾಲಾಕೃತಿ ತಯಾರಿಕೆ ಸ್ಪರ್ಧೆ ಏರ್ಪಡಿಸಿ, ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕೊಪ್ಪಳ ಶಿಶು ಅಭಿವೃದ್ಧಿ ಯೋಜನಾಧಿಕಾರಿ ರೋಹಿಣಿ ಕೊಟಗಾರ, ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ರೂಪಾ ಗಂಧದ ಹಾಗೂ ಶಿವಶರಣಪ್ಪ ಗದ್ದಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗಂಗಮ್ಮ ಸೇರಿದಂತೆ ಮತ್ತಿತರರಿದ್ದರು.

ಪ್ರೀತಿ ಅವರು ಕಾರ್ಯಕ್ರಮ ನಿರೂಪಿಸಿದರು. ವಲಯದ ಎಲ್ಲಾ ಹಿರಿಯ, ಕಿರಿಯ ಮೇಲ್ವಿಚಾರಕಿಯರು, ಪೋಷಣ್ ಅಭಿಯಾನ ಯೋಜನೆಯ ತಾಲ್ಲೂಕಾ ಸಂಯೋಜಕರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಆಶಾ ಕಾರ್ಯಕರ್ತೆಯರು, ಫಲಾನುಭವಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

# ಆಹಾರದಲ್ಲಿ ಅಯೋಡಿನ್ ಅಂಶದ ಉಪ್ಪನ್ನೇ ಬಳಸಿ

## ಡಾ.ನಂದಕುಮಾರ ಹೆಚ್ ಹೇಳಿಕೆ | ರಾಷ್ಟ್ರೀಯ ಅಯೋಡಿನ್ ಕೊರತೆಯ ನ್ಯೂನತೆ ನಿಯಂತ್ರಣ ಸಪ್ತಾಹ



■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ರಾಷ್ಟ್ರೀಯ ಅಯೋಡಿನ್ ಕೊರತೆಯ ನ್ಯೂನತೆ ನಿಯಂತ್ರಣ ಸಪ್ತಾಹ ಕಾರ್ಯಕ್ರಮದ ಅಂಗವಾಗಿ ಅರಿವು ಮೂಡಿಸುವ ಕಾರ್ಯಕ್ರಮವು ಇತ್ತೀಚೆಗೆ ನಗರದ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಯಲ್ಲಿ ನೆಡೆಯಿತು.

ಜಿಲ್ಲಾಸರ್ವೇಕ್ಷಣಾಧಿಕಾರಿ ಡಾ.ನಂದಕುಮಾರ ಹೆಚ್ ಅವರು ಮಾತನಾಡಿ, ಆಯೋಡಿನ್ ಕೊರತೆಯಿಂದ ಮುಖ್ಯವಾಗಿ ಮಕ್ಕಳಲ್ಲಿ ಬುದ್ದಿ ಮಾಂದ್ಯತೆ ಉಂಟಾಗುತ್ತದೆ. ಗರ್ಬಿಣಿ ಮಹಿಳೆಯರಲ್ಲಿ ಗರ್ಭಪಾತ ಮತ್ತು ಹುಟ್ಟುವ ಮಕ್ಕಳಲ್ಲಿ ಜನ್ಮಜಾತ ದೋಷಗಳು ಉಂಟಾಗುತ್ತದೆ. ಪ್ರತಿದಿನ ನಾವೆಲ್ಲರೂ ಐಯೋಡಿನ್ ಯುಕ್ತ ಉಪ್ಪನ್ನು ಸೇವನೆ ಮಾಡಲು ತಿಳಿಸಿದರು. ಸಮುದಾಯ ಮಟ್ಟದಲ್ಲಿ ಆರೋಗ್ಯ ಸಿಬ್ಬಂದಿಯವರಿಂದ ಐಯೋಡಿನ್ ಕೊರತೆಯಿಂದ ಉಂಟಾಗುವ ನೂನ್ಯತೆಗಳ ಬಗ್ಗೆ ಅರಿವು ಮೂಡಿಸುವುದರ ಬಗ್ಗೆ ತಿಳಿಸಿದರು.

ಪ್ರತಿ ವರ್ಷ ಅಕ್ಟೋಬರ್ 21 ರಿಂದ 27 ವರೆಗೆ "ರಾಷ್ಟ್ರೀಯ ಅಯೋಡಿನ್ ಕೊರತೆಯ ನ್ಯೂನತೆ ನಿಯಂತ್ರಣ ಸಪ್ತಾಹ" ಕಾರ್ಯಕ್ರಮ ಆಚರಿಸಲಾಗುತ್ತದೆ. ಮನುಷ್ಯನಿಗೆ ಬದುಕಲು ಮುಖ್ಯವಾಗಿ ನೀರು, ಗಾಳಿ ಹಾಗೂ ಆಹಾರ ಅತ್ಯಂತ ಅವಶ್ಯಕವಾಗಿ ಬೇಕಾಗುತ್ತದೆ. ಅದರಂತೆ ಪೌಷ್ಠಿಕ ಆಹಾರ ಸೇವಿಸುವುದರ ಜೊತೆಗೆ ಅಂಯೋಡಿನ್ ಅಂಶವಿರುವ ಉಪ್ಪನ್ನೇ ಬಳಸಬೇಕು ಇದು ಮನುಷ್ಯನ ದೈಹಿಕ, ಮಾನಸಿಕ ಬೆಳವಣಿಗೆಗೆ ಅತಿ ಅವಶ್ಯಕವಾಗಿರುತ್ತದೆ. ಪ್ರತಿ ಒಬ್ಬರು ತಮ್ಮ ದಿನನಿತ್ಯದ ಆಹಾರದಲ್ಲಿ ಅಯೋಡಿನ್ ಅಂಶವಿರುವ ಉಪ್ಪನ್ನೇ ಬಳಸಬೇಕು. ಇದು ಮನುಷ್ಯನ ಬುದ್ದಿಮಟ್ಟ ಹೆಚ್ಚಿಸಲು ಪ್ರಮುಖ ಪಾತ್ರ ವಹಿಸುತ್ತದೆ. ವಿಶೇಷವಾಗಿ ಗರ್ಭೀಣಿಯರು, ಹಾಲುಣಿಸುವ ತಾಯಂದಿರು, ಮಕ್ಕಳು ಹಾಗೂ ಹದಿ–ಹರೆಯದವರು ಕಡ್ಡಾಯವಾಗಿ ಅಯೋಡಿನ್ ಉಪ್ಪನ್ನೇ ಬಳಸಬೇಕು. ಅಯೋಡಿನ್ ಅಂಶವಿರುವ ಉಪ್ಪನ್ನು ಬಳಸದಿದ್ದರೆ, ಗರ್ಭಿಣಿಯರಲ್ಲಿ ಪದೇ ಪದೇ ಗರ್ಭಪಾತ ಸತ್ತು ಹುಟ್ಟುವ ಮಕ್ಕಳು ಸಂತಾನೋತ್ಪತ್ತಿಯಲ್ಲಿ ತೊಂದರೆ ದೈಹಿಕ ಬೆಳವಣಿಗೆ ಕುಂಠಿತ ವಯಸ್ಕರಲ್ಲಿ ನಿಶ್ಯಕ್ತಿ ಕಾರ್ಯನಿರ್ವಹಣೆಯಲ್ಲಿ ವೈಫಲ್ಯತೆ, ಗಳಗಂಡರೋಗ ಉಂಟಾಗುತ್ತದೆ. ಮಕ್ಕಳಲ್ಲಿ ಬುದ್ದಿಮಾಂದತೆ, ಕಲಿಕೆಯಲ್ಲಿ ಹಿಂದುಳಿವಿಕೆ, ಸರಿಪಡಿಸಲಾಗದ ದೈಹಿಕ ಮತ್ತು ಮಾನಸಿಕ ವಿಕಲತೆ, ಕುಂಠಿತ ಬೆಳವಣಿಗೆ, ಕಿವುಡು ಹಾಗೂ ಮೂಕತನ, ಮೆಳ್ಳಗಣ್ಣು, ಕುಬ್ಜತನ ಉಂಟಾಗುತ್ತದೆ. ಆದ್ದರಿಂದ ಮೇಲ್ಕಾಣಿಸಿದ ಗುಂಪಿನವರು ಅಯೋಡಿನ್ ಉಪ್ಪನ್ನು ಬಳಸಬೇಕೆಂದು ತಿಳಿಸಿದರು

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶ ಶಿವಾನಂದ, ಜಿಲ್ಲಾ ಸರ್ವಕ್ಷಣಾ ಘಟಕದ ಎಲ್.ವಿ. ಸಜ್ಜನರ್, ಹಿರಿಯ ಆರೋಗ್ಯ ನಿರಿಕ್ಷಣಾಧಿಕಾರಿಗಳು, ಜಿಲ್ಲಾ ಪ್ರಯೋಗಾಲಯ ದಿಂದ ತಾಂತ್ರಿಕ ಅಧಿಕಾರಿಗಳಾದ ಸುಧೀರ, ರಾಜಕುಮಾರ, ಮೈಕ್ರೋಬಯಾಲೊಜಿಸ್ಟ್ ಹರ್ಷವರ್ಧನ, ನಗರ ಪ್ರಾಥಮಿಕದ ಆರೋಗ್ಯ ಸುರಕ್ಷತಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ವಕ್ಫ್ ಬೋರ್ಡ್: ಚಂದಾದಾರಿಕೆ ಶುಲ್ಕ ಪಾವತಿಸಲು ಸೂಚನೆ

■ ಹಂಪಿ ಟೈಮ್ಸ್ ಬಳ್ಳಾರಿ

ನಗರದ ಬ್ರೂಸ್‌ಪೇಟೆ ವಕ್ಫ್ ಸಂಸ್ಥೆ ಈದ್ಗಾ(ಸುನ್ನಿ)ಯ ಸಾಮಾನ್ಯ ಸದಸ್ಯರ ದಾಖಲಾತಿ ನೋಂದಣಿಗೆ ದಾಖಾಲಾತಿ ಪ್ರಕ್ರಿಯೆ ಈಗಾಗಲೇ ಚಾಲ್ತಿಯಲ್ಲಿದ್ದು, 2019 ರಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಚಂದಾದಾರಿಕೆ ಶುಲ್ಕ ಕಡ್ಡಾಯವಾಗಿ ಪಾವತಿಸಬೇಕು ಎಂದು ಈದ್ಗಾ(ಸುನ್ನಿ)ಯ ನೋಂದಣಾಧಿಕಾರಿ ಅಧಿಕಾರಿ ಅವರು ತಿಳಿಸಿದ್ದಾರೆ.

ಅಭ್ಯರ್ಥಿಗಳು 200 ರೂ. ಕಡ್ಡಾಯವಾಗಿ ನವೆಂಬರ್ 08ರೊಳಗೆ ಕಚೇರಿಯ ಸಮಯದಲ್ಲಿ ಪಾವತಿಸಬೇಕು. ತಪ್ಪಿದಲ್ಲಿ ಅಂತಹ ಸದಸ್ಯರು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಮತ್ತು ಮತ ಚಲಾಯಿಸಲು ಸಂಸ್ಥೆಯ ಬೈಲಾ, ವಕ್ಫ್ ಕಾಯ್ದೆ 1995 ಮತ್ತು ವಕ್ಫ್ ನಿಯಮಗಳು 2017 ರ ಪ್ರಕಾರ ಅನರ್ಹರಾಗಿರುತ್ತಾರೆ ಎಂದು ತಿಳಿಸಿದ್ದಾರೆ.

### ಸಂಡೂರು ವಿಧಾನಸಭೆ ಉಪಚುನಾವಣೆಗೆ ಚುನಾವಣೆ ವಿಕ್ಷಾಕರಾಗಿ

# ಡಾ.ದಿವ್ಯಾ ಎಸ್.ಅಯ್ಯರ್ ನೇಮಕ

■ ಹಂಪಿ ಟೈಮ್ಸ್ ಬಳ್ಳಾರಿ

ಸಂಡೂರು ವಿಧಾನಸಭೆ ಉಪಚುನಾವಣೆಗೆ ಚುನಾವಣಾ ಸಾಮಾನ್ಯ ವೀಕ್ಷಕರಾಗಿ ಐಎಎಸ್ ಅಧಿಕಾರಿ ಡಾ.ದಿವ್ಯಾ ಎಸ್ ಅಯ್ಯರ್ ಅವರನ್ನು ಭಾರತೀಯ ಚುನಾವಣಾ ಆಯೋಗವು ನೇಮಿಸಿದೆ.

ಸಂಡೂರು ವಿಧಾನಸಭಾ ಕ್ಷೇತ್ರದಲ್ಲಿನ ಚುನಾವಣೆಗೆ ಕೈಗೊಂಡಿರುವ ವ್ಯವಸ್ಥೆ ಮತ್ತು ನೀತಿ ಸಂಹಿತೆ ಉಲ್ಲಂಘನೆಗಳನ್ನು ಪರಿಶೀಲಿಸಲು ಡಾ.ದಿವ್ಯಾ ಎಸ್ ಅಯ್ಯರ್ ಅವರನ್ನು ನೇಮಕ ಮಾಡಲಾಗಿದೆ.

ಸಂಡೂರು ವಿಧಾನಸಭಾ ಕ್ಷೇತ್ರದ ಸಾಮಾನ್ಯ ವೀಕ್ಷಕರಾದ ಐಎಎಸ್ ಅಧಿಕಾರಿ ಡಾ.ದಿವ್ಯಾ ಎಸ್ ಅಯ್ಯರ್ ಅವರು ಸಂಡೂರಿನ ಹೊಸಪೇಟೆ ರಸ್ತೆಯ ಸರ್ಕ್ಯೂಟ್ ಹೌಸ್‌ನ ಕೊಠಡಿ ಸಂಖ್ಯೆ 1 ರಲ್ಲಿ ವಾಸ್ತವ್ಯ ಮಾಡುವರು.

ಸಾರ್ವಜನಿಕರು, ಅಭ್ಯರ್ಥಿಗಳು ಮತ್ತು ರಾಜಕೀಯ ಪಕ್ಷದ ಸದಸ್ಯರು ಯಾವುದೇ ಚುನಾವಣೆಗೆ ಸಂಬಂಧಿಸಿದ ದೂರುಗಳಿದ್ದಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ಸಂಜೆ 4 ರಿಂದ 5 ರವರೆಗೆ ನಿಗದಿತ ಸ್ಥಳ ಮತ್ತು ಸಮಯದಲ್ಲಿ ಸಾಮಾನ್ಯ ವೀಕ್ಷಕರನ್ನು ಭೇಟಿ ಮಾಡಬಹುದು ಅಥವಾ ಅವರ ಮೊ.9141142756 ಗೆ ಸಂಪರ್ಕಿಸಬಹುದು ಎಂದು ಸಂಡೂರು ವಿಧಾನಸಭೆ ಉಪಚುನಾವಣೆಯ ಚುನಾವಣಾಧಿಕಾರಿ ರಾಜೇಶ್.ಎಚ್.ಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಾಲ್ಯವಿವಾಹ ಪ್ರಕರಣ ಹೆಚ್ಚಳ

## ತಹಶೀಲ್ದಾರ್ ಶೃತಿ ಎಂ.ಎಂ. ಹೇಳಿಕೆ

■ ಹಂಪಿ ಟೈಮ್ಸ್ ಹೊಸಪೇಟೆ

ತಾಲೂಕು ಮಟ್ಟದ ಬಾಲ್ಯ ವಿವಾಹ ನಿಷೇಧ ಸಮನ್ವಯ ಸಮಿತಿ ಹಾಗೂ ಕಾವಲು ಸಮಿತಿ ಮತ್ತು ಕೌಟುಂಬಿಕ ದೌರ್ಜನ್ಯ ಕಾಯ್ದೆ ಸಮಿತಿ ಹಾಗೂ ಮಾತೃವಂದನಾ ಯೋಜನಾ ಸಭೆಯನ್ನು ಹೊಸಪೇಟೆ ತಹಶಿಲ್ದಾರರ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆಯಿತು.



ಸಭೆಯ ಅಧ್ಯಕ್ಷತೆ ವಹಿಸಿದ್ದ ತಹಶೀಲ್ದಾರ ಶೃತಿ ಎಂ.ಎಂ. ಮಾತನಾಡಿ, ಸಮಾಜದಲ್ಲಿ ಬಾಲ್ಯ ವಿವಾಹ ಪ್ರಕರಣಗಳು ಹೆಚ್ಚಾಗಿ ಕಂಡು ಬರುತ್ತಿದ್ದು, ಅಪ್ರಾಪ್ತ ಮಕ್ಕಳು ಗರ್ಭೀಣಿಯಾಗುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿರುವ ಬಗ್ಗೆ ಆರೋಗ್ಯ ಇಲಾಖೆಯಿಂದ ಮಾಹಿತಿ ಬರುತ್ತಿವೆ. ಈ ವಿಷಯದ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ರಕ್ಷಣಾ ಘಟಕ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು. ಕಾವಲು ಸಮಿತಿ ಮತ್ತು ಕೌಟುಂಬಿಕ ದೌರ್ಜನ್ಯ ಕಾಯ್ದೆ ಸಮಿತಿಗಳ ಕುರಿತಾದ ಮಾಹಿತಿಯನ್ನು ಸಭೆಯಲ್ಲಿ ವಿವರಿಸಿದರು.

ಸಭೆಯಲ್ಲಿ ತಾಲೂಕು ಮಟ್ಟದ ಅಧಿಕಾರಿಗಳು, ಪೊಲೀಸ್ ಇಲಾಖೆಯ ಸಿಬ್ಬಂದಿ ಹಾಗೂ ವಿವಿಧ ಸಮಿತಿಗಳ ಸದಸ್ಯರುಗಳು ಉಪಸ್ಥಿತರಿದ್ದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಿಂಧು ಅಂಗಡಿ ಸ್ವಾಗತಿಸಿದರು.

# ಪಂಚಮಸಾಲಿ ಭವನಕ್ಕೆ 1 ಕೋಟಿ ರೂ. ಅನುದಾನ

## ಶಾಸಕ ನೇಮಿರಾಜ್ ನಾಯ್ಕ ಭರವಸೆ | ಚಪ್ಪರದಹಳ್ಳಿ ಗ್ರಾಮದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮೆರವಣಿಗೆ ಅದ್ದೂರಿ

■ ಹಂಪಿ ಟೈಮ್ಸ್ ಕೊಟ್ಟೂರು

ಇಂದು ನಾನು ಶಾಸಕನಾಗಿರಲು ಚಪ್ಪರದಹಳ್ಳಿ ಜನರ ಪಾತ್ರ ಹೆಚ್ಚಿದೆ, ಈ ಕಾರಣ ಊರಿನ ಋಣ ನನ್ನ ಮೇಲಿದೆ, ದಶಕಗಳಿಂದ ನೆನೆಗುದಿಗೆ ಬಿದ್ದಿರುವ ಈ ಪಂಚಮಸಾಲಿ ಭವನದ ಕಟ್ಟಡ ನಿರ್ಮಾಣ ಸಂಪೂರ್ಣ ನನ್ನ ಹೊಣೆಯಾಗಿದ್ದು, ಇದರ ನಿರ್ಮಾಣಕ್ಕೆ 1 ಕೋಟಿ ರೂ. ಅನುದಾನ ಕೊಡುತ್ತೇನೆ ಎಂದು ಶಾಸಕ ನೇಮಿರಾಜ್ ನಾಯ್ಕ ಭರವಸೆ ನೀಡಿದರು.



ಕೊಟ್ಟೂರು ತಾಲೂಕಿನ ಚಪ್ಪದರಹಳ್ಳಿಯಲ್ಲಿ ಮಂಗಳವಾರ ಕಿತ್ತೂರು ರಾಣಿ ಚನ್ನಮ್ಮ ಜಯಂತಿಗೆ ಚಾಲನೆ ನೀಡಿ, ರಾಜ್ಯ ಸರ್ಕಾರದಲ್ಲಿ ಹಣವಿಲ್ಲ ಎಲ್ಲಿಂದ ಹಣತಂದು ಕ್ಷೇತ್ರ ಅಭಿವೃದ್ಧಿ ಮಾಡ್ತಾರೆ ಎಂದು ಕೆಲವರು ಗೇಲಿ ಮಾಡುತ್ತಿದ್ದರು. ಕೆ.ಕೆ.ಆರ್.ಡಿ.ಬಿ. ಮೈನಿಂಗ್, ಪಿಎಂವೈ. ಅಮೃತ ಯೋಜನೆಗಳಿಂದ 700 ಕೋಟಿ ಅನುದಾನ ತಂದಿದ್ದು ಕ್ಷೇತ್ರದ ಎಲ್ಲಾ ಗ್ರಾಮಗಳನ್ನು ಅಭಿವೃದ್ದಿಗೊಳಿಸಲಾಗುವುದು ಎಂದರು.

ನಿಮ್ಮೆಲ್ಲರ ಆಶೀರ್ವಾದದಿಂದ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಿದ್ದರೆ, ಕೊಟ್ಟೂರು ಪಟ್ಟಣ ಪಂಚಾಯಿತಿಯನ್ನು ಪುರಸಭೆ ಮಾಡಿ ಚಪ್ಪರದಹಳ್ಳಿಯನ್ನು ಸೇರಿಸುತ್ತೇನೆ. ಆಗ ನಿಮ್ಮೂರು ಇನ್ನೂ ಅಭಿವೃದ್ದಿಯಾಗುತ್ತದೆ ಎಂದರು.

ನಾನು ಕ್ಷೇತ್ರದ ಎಲ್ಲಾ ಸಮುದಾಯಕ್ಕೂ ನ್ಯಾಯಕೊಡಿಸುವುದಲ್ಲದೆ. ಹಗರಿಬೊಮ್ಮನಹಳ್ಳಿ ಪಟ್ಟಣದಲ್ಲಿ ಕನಕದಾಸರ ಪ್ರತಿಮೆ, ವಾಲ್ಮೀಕಿ ಪ್ರತಿಮೆ, ಕಿತ್ತೂರು ರಾಣಿ ಚನ್ನಮ್ಮನ ಪ್ರತಿಮೆಗೆ ತಲಾ 50 ಲಕ್ಷ ರೂ. ಅನುದಾನ ಕೊಡುವುದಾಗಿ ಶಾಸಕ ನೇಮಿರಾಜ್ ನಾಯ್ಕ ಭರವಸೆ ನೀಡಿದರು.

ಜಿಪಂ ಮಾಜಿ ಸದಸ್ಯ ಎಂ.ಎಂ.ಜೆ ಹರ್ಷವರ್ಧನ, ಶಾಸಕ ನೇಮಿರಾಜ್ ನಾಯ್ಕ ಭರವಸೆ ಕೊಟ್ಟಂತೆ ನಡೆದುಕೊಳ್ಳುತ್ತಾರೆ. ಪಂಚಮಸಾಲಿ ಸಮುದಾಯ ಭವನ ನಿರ್ಮಾಣಕ್ಕೆ 1 ಕೋಟಿ ರೂ. ಅನುದಾನ ಕೊಟ್ಟೇ ಕೊಡ್ತಾರೆ,ಈ ಭರವಸೆ ಹುಸಿಯಾಗುವುದಿಲ್ಲ ಎಂದರು.

ಪಂಚಮಸಾಲಿ ಸಮುದಾಯ ಭವನ ನಿರ್ಮಾಣ ಸಮಿತಿ ಅಧ್ಯಕ್ಷ ಬಿ.ಕೊಟ್ರಪ್ಪ, ಕಳೆದ 11 ವರ್ಷಗಳಿಂದ ಪಂಚಮಸಾಲಿ ಭವನ ನಿರ್ಮಾಣ ಕುಂಟುತ್ತ ಸಾಗಿದ್ದು, ಶಾಸಕ ನೇಮಿರಾಜ್ ನಾಯ್ಕ ಪೂರ್ಣಗೊಳಿಸಬೇಕೆಂದು ಭಾವಪರವಶವಾಗಿ ವಿನಂತಿಸಿದರು.

ಸಭೆಯ ನಂತರ ಕಿತ್ತೂರು ರಾಣಿ ಚನ್ನಮ್ಮನ ಭಾವಚಿತ್ರದೊಂದಿಗೆ ಟ್ರಾಕ್ಟರ್‌ನಲ್ಲಿ ಮೆರವಣಿಗೆ ಮಾಡಲಾಯಿತು. ಮಕ್ಕಳು ಕಿತ್ತೂರು ರಾಣಿ ಚನ್ನಮ್ಮ ಸೇರಿದಂತೆ ಇತರೆ ಸ್ವಾತಂತ್ರ ಹೋರಾಟಗಾರರ ವೇಷಹಾಕಿದ್ದು ಗಮನ ಸೆಳೆಯಿತು. ಕಡ್ಲಿ ಪ್ರಶಾಂತ ಮಾತನಾಡಿದರು.

ವೇದಿಕೆಯಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಕೊಟ್ರೇಶಪ್ಪ, ಡಿಸ್ ಮಂಜುನಾಥ, ರಾಂಪುರ ವಿವೇಕಾನಂದ, ಹುಲ್ಮನಿ ಮಲ್ಲೇಶ, ಭರಮನಗೌಡ, ಬಸಾಪುರ ಪಂಪಾಪತಿ. ಅಂಗಡಿ ಪಂಪಾಪತಿ, ಅಯ್ಯನಹಳ್ಳಿ ಕೊಟ್ರೇಶ,ಎಂ. ಶಿವಣ್ಣ, ಚಿರಬಿ ಪ್ರಕಾಶ, ವೀರನಗೌಡ, ಮಹಾಶೇಪ್ಪ, ನಿಂಗಪ್ಪ, ಬೂದಿ ಶಿವಕುಮಾರ್, ದೇವರಮನಿ ಉಮಾದೇವಿ, ವೀಣಾ ವಿವೇಕಾನಂದಗೌಡ ಕೆ. ಎಸ್.ನಾಗರಾಜ್ ಗೌಡ ಮುಂತಾದವರಿದ್ದರು. ಕರಡಿ ಕೊಟ್ರೇಶ ಸ್ವಾಗತಿಸಿದರು.

# ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ; ಮಧ್ಯವರ್ತಿಗಳಿಂದ ಜಾಗೃತರಾಗಿರಿ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯ ಬಳ್ಳಾರಿ (ನಗರ), ಬಳ್ಳಾರಿ (ಗ್ರಾಮಾಂತರ), ಸಂಡೂರು, ಸಿರುಗುಪ್ಪ (ಕಂಪ್ಲಿ) ಯೋಜನೆಗಳಡಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಗೌರವ ಸೇವೆ ಹುದ್ದೆಗಳಿಗೆ ಈಗಾಗಲೇ ಅರ್ಜಿ ಆಹ್ವಾನಿಸಲಾಗಿದ್ದು, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳ ನೇಮಕಾತಿ ಮೆರಿಟ್ ಆಧಾರದ ಮೇಲೆ ಆನ್‌ಲೈನ್ ಮೂಲಕ ಪಾರದರ್ಶಕವಾಗಿ ಆಯ್ಕೆ ಮಾಡಲಾಗುತ್ತಿದೆ. ಮಧ್ಯವರ್ತಿಗಳಿಂದ ಜಾಗೃತರಾಗಿರಬೇಕು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯ ನೇಮಕಾತಿಗಾಗಿ ಗ್ರಾಮ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮಧ್ಯವರ್ತಿಗಳು ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆ ಕೊಡಿಸುವುದಾಗಿ ಹಣ ಕೇಳುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಹಾಗಾಗಿ ಅಭ್ಯರ್ಥಿಗಳು ಯಾವುದೇ ಮಧ್ಯವರ್ತಿಗಳಿಗೆ ಹಣ ನೀಡಿದಲ್ಲಿ ತಾವೇ ನೇರ ಜವಾಬ್ದಾರರಾಗಿರುತ್ತೀರಿ ಎಂದು ಅವರು ತಿಳಿಸಿದ್ದಾರೆ.

ಮಧ್ಯವರ್ತಿಗಳು ಹಣವನ್ನು ಕೇಳಿದಲ್ಲಿ ಅಂತಹವರ ವಿರುದ್ಧ ಪೋಲಿಸ್ ಇಲಾಖೆಯಲ್ಲಿ ಎಫ್‌ಐಆರ್ ದಾಖಲಾಗಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ADVERTISE WITH US
REACH
THOUSANDS OF POTENTIAL CUSTOMERS
HAMPI TIMES DAILY
Classifieds
Display
Take Advantage of Our Special Discounted rates
For More Information 9448633038
www.hampitimes.com

## ನಿತ್ಯ ಪಂಚಾಂಗ

ಮಾಸ: ಆಶ್ವೀಜ । ಸಂವತ್ಸರ: ಕ್ರೋಧಿ

**25–10–2024 – ಶುಕ್ರವಾರ**

| | |
|---|---|
| ತಿಥಿ | : ನವಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪುಷ್ಯ |
| ಯೋಗ | : ಶುಭ |
| ಕರಣ | : ತೈತುಲ |
| ಸೂರ್ಯೋದಯ | : 06:29:37 |
| ಸೂರ್ಯಾಸ್ತ | : 17:51:54 |
| ರಾಹು ಕಾಲ | : 10:45–12:11 |
| ಯಮಘಂಡ ಕಾಲ | : 15:01–16:27 |
| ಗುಳಿಕ ಕಾಲ | : 07:55–09:20 |

## ತುಂಗಭದ್ರಾ ನೀರಿನ ಮಟ್ಟ



**ಗುರುವಾರ : 24–10–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.94 ಅಡಿ |
| ಒಳ ಹರಿವು | 97751 ಕ್ಯುಸೆಕ್ |
| ಹೊರ ಹರಿವು | 96487 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.539 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1610.54 ಅಡಿ |
| ಒಳ ಹರಿವು | 508 ಕ್ಯುಸೆಕ್ |
| ಹೊರ ಹರಿವು | 9790 ಕ್ಯುಸೆಕ್ |
| ಸಾಮರ್ಥ್ಯ | 38.648 ಟಿಎಂಸಿ |

# ಜಿಲ್ಲೆಯ ಅಭಿವೃದ್ಧಿಗೆ ಶ್ರಮವಹಿಸಿ

**ಡಿಸಿ ಎಂ.ಎಸ್.ದಿವಾಕರ ಹೇಳಿಕೆ । ಎಸ್‌ಸಿಎಸ್‌ಪಿ, ಟಿಎಸ್‌ಪಿ ಪ್ರಗತಿ ಪರಿಶೀಲನಾ ಸಭೆ**

**ವಿಜಯನಗರ ಜಿಲ್ಲೆಗೆ ಮೂರು ವರ್ಷ, ಪ್ರಾಮಾಣಿಕ ಕೆಲಸದಿಂದ ಮಾತ್ರ ಅಭಿವೃದ್ಧಿ**





■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯಾಗಿ 3 ವರ್ಷ ಕಳೆದಿದ್ದು ಇನ್ನೂ ಅಭಿವೃದ್ಧಿ ಪಥದತ್ತ ಸಾಗಬೇಕಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಶ್ರಮವಹಿಸಿ ಸರ್ಕಾರದ ಯೋಜನೆ, ಸೌಲಭ್ಯಗಳನ್ನು ಅನುಷ್ಠಾನ ಮಾಡುವ ಪ್ರಾಮಾಣಿಕ ಕೆಲಸ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇಲಾಖಾವಾರು ಅಧಿಕಾರಿಗಳು ಸಭೆಗೆ ಸರಿಯಾದ ಮಾಹಿತಿ ಒದಗಿಸಬೇಕು, ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಮಾತ್ರವಲ್ಲದೆ ದತ್ತಾಂಶ ಸಂಗ್ರಹಣೆಯಲ್ಲಿಯೂ ಸಹ ನಿಖರತೆ ಇರಬೇಕು, ಆಗಿದ್ದಾಗ ಮಾತ್ರ ಯೋಜನೆಯ ಸ್ಥಿತಿಗತಿ ತಿಳಿಯಲು ಸಾಧ್ಯ. ಜಿಲ್ಲಾ ಮಟ್ಟದ ಅಧಿಕಾರಿಗಳು ಅನುಮತಿ ಪಡೆಯದೆ ಸಭೆಗಳಿಗೆ ಗೈರಾದರೆ ಅಂತವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಅಧಿಕಾರಿಗಳಿಗೆ ಎಚ್ಚರಿಸಿದರು.

ಜಿಲ್ಲೆಯಲ್ಲಿ ಕೃಷಿ ಇಲಾಖೆಗೆ ಎಸ್‌ಸಿಎಸ್‌ಪಿ ಯೋಜನೆಯಡಿ ಎಲ್ಲಾ ವಲಯಗಳಿಂದ ಒಟ್ಟು 283.53 ಲಕ್ಷ ಹಣ ಬಿಡುಗಡೆ ಮಾಡಿದ್ದು, ಅದರ ಪೈಕಿ 277.90 ಲಕ್ಷ ಹಣ ಬಳಕೆಯಾಗಿದೆ ಹಾಗೂ ಟಿಎಸ್‌ಪಿ ಯೋಜನೆಯಡಿ 142.44 ಲಕ್ಷ ಹಣ ಬಿಡುಗಡೆ ಮಾಡಿದ್ದು, 140.65 ಲಕ್ಷ ಹಣ ಬಳಕೆಯಾಗಿದೆ. ಹೀಗೆ ತೋಟಗಾರಿಕೆ ಇಲಾಖೆಯಲ್ಲಿ ಎಸ್‌ಸಿಎಸ್‌ಪಿ ಯೋಜನೆಯಡಿ ಶೇ.66 ಮತ್ತು ಟಿಎಸ್‌ಪಿ ಯೋಜನೆಯಡಿ ಶೇ.93 ರಷ್ಟು ಹಣ ಬಳಕೆಯಾಗಿದೆ. ಈ ಯೋಜನೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಅಭಿವೃದ್ಧಿಗಾಗಿ ರೂಪಿಸಿರುವ ಯೋಜನೆಗಳು ಇದರ ಫಲ ಶೃತಿ ಅವರಿಗೆ ದೊರೆಯುವ ಹಾಗೆ ಕೆಲಸ ನಿರ್ವಹಿಸಿ ಎಂದರು.

ಪಶು ಸಂಗೋಪನಾ ಇಲಾಖೆಯಲ್ಲಿ ಬರುವ ರಾಷ್ಟ್ರೀಯ ಜಾನುವಾರು ಮಿಷನ್ ಅಡಿ ವಿಮಾಯೋಜನೆ ಸರಿಯಾಗಿ ನಿರ್ವಹಿಸಿದ್ದಿರಾ ಎಂದು ಜಿಲ್ಲಾಧಿಕಾರಿಗಳು ಕೇಳಿದರು. ಅದಕ್ಕೆ ಉತ್ತರಿಸಿದ ಪಶು ಸಂಗೋಪನಾ ಇಲಾಖೆಯ ಅಧಿಕಾರಿ ವಿಮಾ ಯೋಜನೆಗೆ 75 ಅರ್ಜಿಗಳು ಸ್ವೀಕೃತಿಯಾಗಿದ್ದು, ಅವುಗಳನ್ನು ಮುಂದಿನ ಹಂತಕ್ಕೆ ಕಳುಹಿಸಲಾಗಿದೆ ಎಂದರು.

ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಈ ಯೋಜನೆಗಳಡಿಯಲ್ಲಿ ಹೆಣ್ಣು ಮಕ್ಕಳ ಶುಲ್ಕ ಮರುಪಾವತಿ ಯಾಗುವುದರಿಂದ ಶೇ.100 ರಷ್ಟು ಹಣ ಉಪಯೋಗವಾಗಿದೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಅಧಿಕಾರಿ ಸಭೆಗೆ ಮಾಹಿತಿ ನೀಡಿದರು.

ಪ್ರವಾಸೋದ್ಯಮ ಇಲಾಖೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 8.9.10ನೇ ತರಗತಿಯ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಯೋಜನೆಯಡಿ 5 ದಿನ ಪ್ರವಾಸ ಕೈಗೊಳ್ಳಬೇಕಿತ್ತು, ಯಾಕೆ ಪ್ರವಾಸ ಕೈಗೊಂಡಿಲ್ಲ ಎಂದು ಜಿಲ್ಲಾಧಿಕಾರಿಗಳು ಪ್ರಶ್ನಿಸಿದರು, ಇದಕ್ಕೆ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಯವರು ಶಾಲಾ ಶಿಕ್ಷಣ ಇಲಾಖೆಯಿಂದ ಮಕ್ಕಳ ಪಟ್ಟಿ ಕಳುಹಿಸುವುದು ತಡವಾದ ಕಾರಣ ಪ್ರವಾಸ ಕೈಗೊಳ್ಳಲಾಗಿಲ್ಲ, ಮುಂದಿನ ದಿನಗಳಲ್ಲಿ ಅನುಷ್ಠಾನ ಮಾಡಲಾಗುವುದು ಎಂದು ಉತ್ತರಿಸಿದರು.

ಅಧಿಕಾರಿಗಳು ನಾನಾ ಕಾರಣ ಹೇಳಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರನ್ನು ಯೋಜನೆಗಳಿಂದ ವಂಚಿತರನ್ನಾಗಿಸಬೇಡಿ ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಕಟ್ಟು ನಿಟ್ಟಿನ ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೊಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಷಾ, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಶರಣಪ್ಪ ಮುದಗಲ್, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಎಸ್., ಡಿ.ಹೆಚ್.ಓ ಡಾ.ಶಂಕರ್ ನಾಯ್ಕ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಬಿ.ರಾಮಚಂದ್ರಪ್ಪ ಹಾಗೂ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

# ಪತ್ರಿಕೋದ್ಯಮ ಅಪ್ರೆಂಟಿಸ್ ತರಬೇತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಪರಿಶಿಷ್ಟ ಜಾತಿಯ ಓರ್ವ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಒಬ್ಬರಿಗೆ ಪತ್ರಿಕೋದ್ಯಮದಲ್ಲಿ ಪದವಿ ಅಥವಾ



ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದವರಿಗೆ ಮಾಧ್ಯಮ ಕ್ಷೇತ್ರ ಹಾಗೂ ಮಾಧ್ಯಮ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು 12 ತಿಂಗಳ ಅವಧಿಯ ಅಪ್ರೆಂಟಿಸ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಬರುವ ನವೆಂಬರ್ 25 ಕೊನೆಯ ದಿನವಾಗಿದೆ. 12 ತಿಂಗಳ ಅಪ್ರೆಂಟಿಸ್ ತರಬೇತಿಗಾಗಿ ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತ್ತಕೋತ್ತರ ಪದವಿ ಜೊತೆಗೆ ಕಂಪ್ಯೂಟರ್ ಜ್ಞಾನ, ಕನ್ನಡ ಭಾಷೆ ಬಳಸಲು ಪ್ರಬುದ್ಧತೆ ಇರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಗಳಿಗೆ 35 ವರ್ಷ ಮೀರಿರಬಾರದು. ಅರ್ಜಿ ಲಕೋಟೆಯ ಮೇಲೆ ಕಡ್ಡಾಯವಾಗಿ ವಿಶೇಷ ಘಟಕ ಯೋಜನೆಯಡಿ ಹಾಗೂ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನೀಡುವ ಅಪ್ರೆಂಟಿಸ್ ತರಬೇತಿಗಾಗಿ ಅರ್ಜಿ ಎಂದು ನಮೂದಿಸಬೇಕು. ಆಯ್ಕೆಯಾದ ಅಭ್ಯರ್ಥಿಗಳು ಸಂದರ್ಶನದ ವೇಳೆ ಮೂಲ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು. ಆಯ್ಕೆಯಾಗಿ ತರಬೇತಿಗೆ ಹಾಜರಾಗುವ ಸಂದರ್ಭದಲ್ಲಿ ಮೂಲ ದಾಖಲಾತಿಗಳನ್ನು ಕಚೇರಿಗೆ ಸಲ್ಲಿಸಬೇಕು.

ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಅಭ್ಯರ್ಥಿಗಳು ಪದವಿಯ ಎಲ್ಲ ವರ್ಷಗಳ ಅಂಕಪಟ್ಟಿಗಳು, ಸ್ನಾತ್ತಕೋತ್ತರ ಪದವಿಯ ಎಲ್ಲ ಅಂಕಪಟ್ಟಿಯೊಂದಿಗೆ ಅರ್ಜಿ ಸಲ್ಲಿಸಬೇಕು. ಅಂಕಪಟ್ಟಿಯನ್ನು ನಿರೀಕ್ಷಿಸಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ತರಬೇತಿಯ ಅವಧಿ ವೇಳೆ ಮಾಹೆಯಾನ 15,000 ರೂ ಶಿಷ್ಯವೇತನ ನೀಡಲಾಗುವುದು. ತರಬೇತಿಯು 2025ರ ಜನವರಿಯಿಂದ ಡಿಸೆಂಬರ್‌ವರೆಗೆ 12 ತಿಂಗಳ ಅವಧಿಯದಾಗಿದ್ದು, ಇದು ತಾತ್ಕಾಲಿಕವಾಗಿರುತ್ತದೆ. ತರಬೇತಿ ಮುಗಿದ ನಂತರ ಮುಂದುವರೆಸಲು ಅಥವಾ ಖಾಯಂಗೊಳಿಸಲು ಯಾವುದೇ ಅವಕಾಶ ಇರುವುದಿಲ್ಲ. ತರಬೇತಿಯ ಅವಧಿಯಲ್ಲಿ ತರಬೇತಾರ್ಥಿಗಳು ಬೇರೆ ಉದ್ಯೋಗ ಮಾಡುವಂತಿಲ್ಲ. ತರಬೇತಿಯ ಅವಧಿಯ ಮಧ್ಯದಲ್ಲಿ ಬಿಟ್ಟು ಹೋದರೆ, ಮೂಲ ದಾಖಲಾತಿಗಳನ್ನು ಅವಧಿಗೆ ಮುನ್ನ ಹಿಂದುರುಗಿಸುವುದಿಲ್ಲ. ಒಮ್ಮೆ ಫಲಾನುಭವಿಯಾದವರನ್ನು ಈ ಯೋಜನೆಯಡಿ ಮತ್ತೊಂದು ಅವಧಿಗೆ ಆಯ್ಕೆ ಮಾಡಲು ಅವಕಾಶವಿರುವುದಿಲ್ಲ ಹಾಗೂ ಸುಳ್ಳು ಮಾಹಿತಿ ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.

ಆಸಕ್ತರು ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗೆ ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ತಹಶೀಲ್ದಾರ್ ಕಚೇರಿಯ ಹಿಂದುಗಡೆ, ಹೊಸಪೇಟೆ, ವಿಜಯನಗರ ಜಿಲ್ಲೆ. ಅಥವಾ ಮೊ.9480841218 ಗೆ ಸಂಪರ್ಕಿಸಬಹುದು ಎಂದು ಹಿರಿಯ ಸಹಾಯಕ ನಿರ್ದೇಶಕ ಧನಂಜಯ ಬಿ. ತಿಳಿಸಿದ್ದಾರೆ.

# ವರುಣನ ಕೃಪೆಯಿಂದ ಕೆರೆಗಳು ಭರ್ತಿ

**ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿಕೆ। ರೈತರಿಗೆ ಅನುಕೂಲ**

■ **ಹಂಪಿ ಟೈಮ್ಸ್ ಹರಪನಹಳ್ಳಿ**

ಈ ವರ್ಷ ವರುಣದೇವನ ಕೃಪೆಯಿಂದ ತಾಲೂಕಿನ ಸಾಕಷ್ಟು ಮಳೆಯಾಗಿದ್ದರಿಂದ ಕೆರೆ, ಕಟ್ಟೆಗಳು ಭರ್ತಿಯಾಗಿ ಕೋಡಿ ಬಿದ್ದಿವೆ. ಅಲ್ಲದೆ, ಹಳ್ಳ, ಕೊಳ್ಳಗಳು ತುಂಬಿ ಹರಿಯುತ್ತಿರುವುದರಿಂದ ಕೆರೆಯ ಸುತ್ತ ಮುತ್ತಲೂ ಜಮೀನು ಇರುವ ರೈತರಿಗೆ ಅನುಕೂಲವಾಗಲಿದೆ ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿದರು.

ತಾಲೂಕಿನ ಕುಂಚೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕುಂಚೂರು ಗ್ರಾಮದ ಕೆರೆಯ ಸಂಪೂರ್ಣ ತುಂಬಿ ಕೋಡಿ ಬಿದ್ದಿದ್ದರಿಂದ ಗ್ರಾಮಸ್ಥರೊಂದಿಗೆ ಬುಧವಾರ ಬಾಗಿನ ಅರ್ಪಿಸಿ ಮಾತನಾಡಿದರು.

ತಾಲೂಕಿನಲ್ಲಿಮಳೆಕೊರತೆಯಾಗುವುದರಿಂದ ಜನ, ಜಾನುವಾರುಗಳಿಗೂ ಕುಡಿವ ನೀರಿನ ಸಮಸ್ಯೆ ಉದ್ಭವಿಸುವುದು ಸಾಮಾನ್ಯವಾಗಿತ್ತು. ಆದರೆ, ಈ ಸಲ ಸುರಿದ ಹೆಚ್ಚಿನ ಮಳೆಯಿಂದ



ಕೆರೆ, ಕಟ್ಟೆಗಳು ತುಂಬಿರುವುದು ಅಂತರ್ಜಲ ಮಟ್ಟ ಹೆಚ್ಚುವುದರಿಂದ ಮುಂಬರುವ ಬೇಸಿಗೆಯಲ್ಲಿ ಕುಡಿವ ನೀರಿಗೆ ತೊಂದರೆ ಯಾಗಲಾರದು ಎಂದು ತಿಳಿಸಿದರು.

ಕುಂಚೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಕುಬ್ಯಾನಾಯ್ಕ್, ಪಿಡಿಒ ಸಮುದ್ರಿ ಮಂಜುನಾಥ, ಕಾರ್ಯದರ್ಶಿ ಡಿ.ಕೆಂಚಪ್ಪ, ಉಪಾಧ್ಯಕ್ಷರು ಪಾರಿಬಾಯಿ, ಮತ್ತು ಸರ್ವ ಸದಸ್ಯರು ಮತ್ತು ಗ್ರಾಮ ಪಂಚಾಯಿತಿಯ ಅಧಿಕಾರಿಗಳು ಸಹ ಸಿಬ್ಬಂದಿಗಳು ಮತ್ತು ಕುಂಚೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಮುಖಂಡರು ಮತ್ತು ರೈತ ಬಾಂಧವರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

# ಎಚ್ಚೆತ್ತುಕೊಳ್ಳದಿದ್ದರೆ ಕಪ್ಪು ಪಟ್ಟಿ ಪ್ರದರ್ಶನಕ್ಕೂ ಸಿದ್ಧ

■ **ಹಂಪಿ ಟೈಮ್ಸ್ ಹರಪನಹಳ್ಳಿ**

ಹೋಬಳಿ ಕೇಂದ್ರಕ್ಕೆ ಮತ್ತು ತಾಲೂಕುಗಳಿಗೆ ಪ್ರಯಾಣ ಮಾಡಲಿಕ್ಕೆ ಆಗಮಿಸುವ ಪ್ರಯಾಣಿಕರಿಗೆ ಸರಿಯಾದ ರಸ್ತೆ, ಸಮಯಕ್ಕೆ ಬಸ್‌ಗಳು ಹಾಗೂ ನಿಲ್ದಾಣ, ಶೌಚಾಲಯ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಅಖಿಲ ಭಾರತ ಕಿಸಾನ್ ಸಭಾ ಜಿಲ್ಲಾಧ್ಯಕ್ಷ ಗುಡಿಹಳ್ಳಿ ಹಾಲೇಶ್ ಆಗ್ರಹಿಸಿದರು.

ತಾಲೂಕಿನ ಅರಸೀಕೆರೆ ಉಚ್ಚಂಗಿದುರ್ಗ ದಾವಣಗೆರೆ ರಸ್ತೆ ಗುರುವಾರ ಅಖಿಲ ಭಾರತ ಕಿಸಾನ್ ಸಭಾ ವಿದ್ಯಾರ್ಥಿ ಯುವಜನ, ರೈತರು, ದಲಿತ ಸಂಘಟನೆಗಳಿಂದ ರಸ್ತೆ ತಡೆ ಪ್ರತಿಭಟನೆಯಲ್ಲಿ ಮಾತನಾಡಿದರು. ಸಾಹಿತಿಗಳು, ಕಲಾವಿದರು, ಹೋರಾಟಗಾರರು, ಸಂಸದರು, ಶಾಸಕರುಗಳು ಸಚಿವರು ಆಗಲಿಕ್ಕೆ ಈ ಭಾಗದ ಜನರ ಶ್ರಮವಿರುತ್ತದೆ. ಸಮುದಾಯ ಆರೋಗ್ಯ ಕೇಂದ್ರವಿದ್ದರೂ ವೈದ್ಯರು ಮತ್ತು ನರ್ಸ್‌ಗಳಿಲ್ಲದೆ ರೋಗಿಗಳು ಸಕಾಲದಲ್ಲಿ ಚಿಕಿತ್ಸೆ ಇಲ್ಲದೆ ರೋಗಿಗಳು ಸಾವಿಗೀಡಾಗು ತ್ತಿದ್ದಾರೆ ಎಂದರು.

ಅಖಿಲ ಭಾರತ ಯುವ ಜನ ಫೆಡೆರೇಷನ್ ಎಸ್.ಎಂ.ಸಂತೋಶ್ ಮಾತನಾಡಿ, ಶಿಕ್ಷಣಕ್ಕಾಗಿ ನಿತ್ಯ ಸಾವಿರಾರು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹೋಬಳಿ ಕೇಂದ್ರಕ್ಕೆ ಬರುತ್ತಿದ್ದು ವಿದ್ಯಾರ್ಥಿಗಳಿಗೆ ವಸತಿ ನಿಲಯ



ಇಲ್ಲದೆ ಪರದಾಡುವ ಪರಿಸ್ಥಿತಿ ಎದುರಾಗಿದೆ. ನಾಡಕಚೇರಿಯ ಕಟ್ಟಡ ಶಿಥಿಲಗೊಂಡಿದ್ದು, ಸರಿಯಾದ ಕಟ್ಟಡವಿಲ್ಲದೆ ಅಧಿಕಾರಿಗಳಿಗೆ ಹಾಗೂ ಜನಗಳಿಗೆ ತುಂಬಾ ತೊಂದರೆ ಯಾಗಿದೆ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು, ಕಂದಾಯ ನೀರಿಕ್ಷಕರು, ಉಪ ತಹಶಿಲ್ದಾರರು ಹಾಗೂ ಸಿಬ್ಬಂದಿ ಇಲ್ಲದೆ ರೈತರಿಗೆ ಹಾಗೂ ಜನಸಾಮಾನ್ಯರಿಗೆ ಸೇವೆ ಪಡೆಯಲು ಪರದಾಡುವಂತಾಗಿದೆ ಎಂದರು.

ರೈತ ಸಂಘದ ಮುಖಂಡ ಬೂದಾಳು ಸಿದ್ದಪ್ಪ ಮಾತನಾಡಿ, ಅರಸೀಕೆರೆ 7 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳಿಗೆ ಆಶ್ರಯ ಮನೆ ನೀಡದಿರುವುದು ಖಂಡನೀಯ, ಈ ಭಾಗದ ಜನರ ಕಣ್ಣಿಗೆ ಸುಣ್ಣ ಇಟ್ಟಿದ್ದಾರೆ. ಹಲವಾರು ಬಾರಿ ಹೋರಾಟ ಮಾಡಿದರು ಸಂಬಂಧಿಸಿದ ಅಧಿಕಾರಿಗಳು ಮತ್ತು ರಾಜಕಾರಣಿಗಳು ಜನರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ ಎಂದರು.

ದಲಿತ ಸಂಘಟನೆಯ ರಾಜ್ಯ ಸಂಚಾಲಕ ಕಬ್ಬಳ್ಳಿ ಮೈಲಪ್ಪ ಮಾತನಾಡಿ, ಈ ಭಾಗದ ಜನರರು ಆರ್ಥಿಕವಾಗಿ ಹಿಂದಿರಬಹುದು, ಆದರೆ ದಡ್ಡರಲ್ಲ. ಜನರ ಬೇಡಿಕೆ ಈಡೇರಿಕೆಗೆ ಮುಂದಾಗದಿದ್ದರೆ ಅಧಿಕಾರಿಗಳು ಮತ್ತು ರಾಜಕಾರಣಿಗಳು ಕಂಡ ಕಂಡಲ್ಲಿ ಮತದಾರರು ಘೆರಾವು ಮತ್ತು ಕಪ್ಪು ಪಟ್ಟಿ ಪ್ರದರ್ಶನ ಮಾಡುವ ದಿನಗಳು ದೂರ ಇಲ್ಲ ಎಂದು ಎಚ್ಚರಿಸಿದರು. ಉಪತಹಶೀಲ್ದಾರ್ ಮನವಿ ಸ್ವೀಕರಿಸಿ, ಭರವಸೆ ನೀಡಿದರು.

ಬಳಿಗನೂರು ಕೊಟ್ರೇಶ್, ಡಿ.ನಾಗಪ್ಪ, ರಾಗಿ ಮಸಲವಾಡ ಹನುಮಂತಪ್ಪ, ಡಿ,ಹೆಚ್. ಅರುಣ, ಸತ್ತೂರು ಮಹಾದೇವಪ್ಪ, ಹಗರಿ ಗುಡಿಹಳ್ಳಿ ಶಿವರಾಮ, ಪುಣಬಗಟ್ಟಿ ಮಂಜುನಾಥ, ಮಾರುತಿ, ಪಕ್ಕೀರಪ್ಪ, ರಮೇಶ್ ಕ್ಯಾರಕಟ್ಟಿ ಆಟೋ ಚಾಲಕರಾದ ಎಂ.ಬಸವರಾಜ, ಕಬ್ಬಳ್ಳಿ ರಮೇಶ್, ಪ್ರಭು, ಕಾಳೇಶ್, ಖಾಶಿ, ಗುರು, ಇರ್ಫಾನ್, ಜಿ. ಮಂಜುನಾಥ ಸೇರಿದಂತೆ ಆನೇಕ ಸಂಘಟನೆಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

## ಅಧ್ಯಾಯ 3 : ಲೋಹಗಳು ಮತ್ತು ಆಲೋಹಗಳು

ಮುಂದುವರೆದ ಭಾಗ ........

9. ಮಿಶ್ರಲೋಹಗಳು ಎಂದರೇನು ? ಈ ಕೆಳಗಿನ ಮಿಶ್ರಲೋಹದಲ್ಲಿರುವ ಘಟಕ ಧಾತುಗಳನ್ನು ಹೆಸರಿಸಿ.

a. ಕಂಚು b. ಬೆಸುಗೆ ಲೋಹ c. ಕಲೆರಹಿತ ಉಕ್ಕು d. ಹಿತ್ತಾಳೆ

ಉತ್ತರ : ಎರಡು ಅಥವಾ ಹೆಚ್ಚು ಲೋಹ ಅಥವಾ ಲೋಹ–ಅಲೋಹಗಳ ಸಮರೂಪದ ಮಿಶ್ರಣವೇ ಮಿಶ್ರಲೋಹ.


a. ಕಂಚು ನಲ್ಲಿರುವ ಘಟಕ ಧಾತುಗಳು– ತಾಮ್ರ ಮತ್ತು ತವರ

b. ಬೆಸುಗೆ ಲೋಹದನಲ್ಲಿರುವ ಘಟಕ ಧಾತುಗಳು – ಸೀಸ ಮತ್ತು ತವರ

c. ಕಲೆರಹಿತ ಉಕ್ಕು ನಲ್ಲಿರುವ ಘಟಕ ಧಾತುಗಳು– ಕಬ್ಬಿಣ, ನಿಕ್ಕಲ್, ಕ್ರೋಮಿಯಂ

d. ಹಿತ್ತಾಳೆ ನಲ್ಲಿರುವ ಘಟಕ ಧಾತುಗಳು– ತಾಮ್ರ ಮತ್ತು ಸತು

10. ಲೋಹದ ಮೇಲೆ ಹಬೆಯ ವರ್ತನೆಯ ತೋರಿಸುವ ಪ್ರಯೋಗದ ಉಪಕರಣಗಳ ಜೋಡಣೆಯ ಚಿತ್ರವನ್ನು ಬರೆಯಿರಿ. ಎಲ್ಲ ಭಾಗಗಳನ್ನು ಗುರುತಿಸಿ. JUNE- 2019 / MARCH-2023/ JUNE-2023




11. ಪಾದರಸದ ಅದಿರನ್ನು ಹೆಸರಿಸಿ. ಈ ಅದಿರಿನಿಂದ ಪಾದರಸವನ್ನು ಪಡೆಯುವ ವಿಧಾನವನ್ನು ವಿವರಿಸಿ ಹಾಗೂ ಇಲ್ಲಿ ಜರಗುವ ಕ್ರಿಯೆಗಳ ಸಮೀಕರಣ ಬರೆಯಿರಿ.

ಉತ್ತರ : • ಪಾದರಸದ ಅದಿರು – ಸಿನ್ನಬಾರ್

• ಈ ಅದಿರನ್ನು ಗಾಳಿಯಲ್ಲಿ ಕಾಸಿದಾಗ ಮೊದಲು ಪಾದರಸದ ಆಕ್ಸೈಡ್ ದೊರೆಯುತ್ತದೆ. ಇದನ್ನು ಇನ್ನಷ್ಟು ಕಾಸಿದಾಗ ಅಪಕರ್ಷಿಸಲ್ಪಟ್ಟು ಪಾದರಸ ದೊರೆಯುತ್ತದೆ.

$$2HgS + 3O_2 \rightarrow 2HgO + 2SO_2$$
$$2HgO \rightarrow 2Hg + O_2$$

12. ತಣ್ಣೀರಿನೊಂದಿಗೆ ಶೀಘ್ರವಾಗಿ ವರ್ತಿಸುವ ಎರಡು ಲೋಹಗಳನ್ನು ಹೆಸರಿಸಿ.ಈ ಲೋಹಗಳು ತಣ್ಣೀರಿನೊಂದಿಗೆ ವರ್ತಿಸಿದಾಗ ಉಂಟಾಗುವ ಉತ್ಪನ್ನಗಳನ್ನು ಬರೆಯಿರಿ.

ಉತ್ತರ : ಪೊಟ್ಯಾಸಿಯಂ ಮತ್ತು ಸೋಡಿಯಂನಂತಹ ಲೋಹಗಳು ಅತ್ಯಂತ ರಭಸವಾಗಿ ತಣ್ಣೀರಿನ ಜೊತೆ ಪ್ರತಿವರ್ತಿಸುತ್ತವೆ.

$2K(s) + 2H_2O(l) \rightarrow 2KOH(aq) + H_2(g)$ + ಉಷ್ಣ ಶಕ್ತಿ ,

ಉತ್ಪನ್ನ : ಪೋಟಾಶಿಯಂ ಹೈಡ್ರಾಕ್ಸೈಡ್ ಮತ್ತು ಹೈಡ್ರೋಜನ್

$2Na(s) + 2H_2O(l) \rightarrow 2NaOH(aq) + H_2(g)$ + ಉಷ್ಣ ಶಕ್ತಿ ,

ಉತ್ಪನ್ನ : ಸೋಡಿಯಂ ಹೈಡ್ರಾಕ್ಸೈಡ್ ಮತ್ತು ಹೈಡ್ರೋಜನ್

13. ಕಾರಣ ಕೊಡಿ.

1. ಬೆಳ್ಳಿಯ ಪಾತ್ರೆಗಳನ್ನು ಗಾಳಿಗೆ ತೆರೆದಿಟ್ಟಾಗ ಕ್ರಮೇಣ ಕಪ್ಪಾಗುತ್ತವೆ

ಉತ್ತರ : ಬೆಳ್ಳಿಯು ಗಾಳಿಯಲ್ಲಿರುವ ಸಲ್ಫರ್ ನೊಂದಿಗೆ ವರ್ತಿಸಿ ಬೆಳ್ಳಿಯ ಸಲ್ಫೈಡ್ ಉಂಟಾಗುತ್ತದೆ.

2. ತಾಮ್ರವನ್ನು ಗಾಳಿಗೆ ತೆರೆದಿಟ್ಟಾಗ ಕ್ರಮೇಣ ಕಂದು ಪದರನ್ನು ಕಳೆದುಕೊಳ್ಳುತ್ತದೆ.

ಉತ್ತರ : ತಾಮ್ರವು ಗಾಳಿಯಲ್ಲಿನ ಕಾರ್ಬನ್ ಡೈ ಆಕ್ಸೈಡ್ ನೊಂದಿಗೆ ವರ್ತಿಸಿ ತಾಮ್ರದ ಕಾರ್ಬೋನೇಟ್ ಉಂಟಾಗುತ್ತದೆ.

3. ಕಬ್ಬಿಣವನ್ನು ದೀರ್ಘಕಾಲದವರೆಗೆ ಗಾಳಿಯಲ್ಲಿ ತೆರೆದಿಟ್ಟಾಗ ತುಕ್ಕು ಹಿಡಿಯುತ್ತದೆ.

ಉತ್ತರ : ಕಬ್ಬಿಣವು ತೇವ ಪೂರಿತ ಗಾಳಿಯಲ್ಲಿರುವ ಆಕ್ಸಿಜನ್ ನೊಂದಿಗೆ ವರ್ತಿಸಿ ಕಬ್ಬಿಣದ ಜಲೀಯ ಆಕ್ಸೈಡ್ ನ ಕಂದು ಬಣ್ಣದ ಪದರ ಉಂಟಾಗುತ್ತದೆ.

14. ಲೋಹಗಳ ಯಾವುದಾದರೂ ನಾಲ್ಕು ಭೌತಿಕ ಲಕ್ಷಣಗಳನ್ನು ಬರೆಯಿರಿ.

ಉತ್ತರ : * ಲೋಹಗಳು ಹೊಳೆಯುತ್ತವೆ,

* ಕುಟ್ಯ ಮತ್ತು ತನ್ಯ ಗುಣಗಳನ್ನು ಹೊಂದಿವೆ,
* ಉಷ್ಣ ಮತ್ತು ವಿದ್ಯುತ್ತಿನ ಉತ್ತಮ ವಾಹಕಗಳು,
* ಕೊಠಡಿಯ ಉಷ್ಣತೆಯಲ್ಲಿ ಘನರೂಪದಲ್ಲಿರುತ್ತವೆ.

15. ಕಾರ್ಮಿಕನೊಬ್ಬನು ತನ್ನ ಕುಲುಮೆಯಲ್ಲಿ ಅಲ್ಯೂಮಿನಿಯಂನೊಂದಿಗೆ ಕಬ್ಬಿಣದ ಆಕ್ಸೈಡ್ ಪ್ರತಿವರ್ತಿಸುವಂತೆ ಮಾಡಿರುತ್ತಾನೆ.

1. ಇಲ್ಲಿ ನಡೆಯುವ ರಾಸಾಯನಿಕ ಕ್ರಿಯೆಯನ್ನು ಹೆಸರಿಸಿ ?
2. ಈ ಕ್ರಿಯೆಯ ಪ್ರಾಯೋಗಿಕ ಅನ್ವಯಗಳನ್ನು ಬರೆಯಿರಿ.

ಅಥವಾ

ಥರ್ಮೈಟ್ ಕ್ರಿಯೆಗಳು ಎಂದರೇನು ? ಥರ್ಮೈಟ್ ಕ್ರಿಯೆಗಳ ಪ್ರಾಯೋಗಿಕ ಅನ್ವಯಗಳನ್ನು ತಿಳಿಸಿ.

ಉತ್ತರ : ಥರ್ಮೈಟ್ ಕ್ರಿಯೆ. ಹೆಚ್ಚು ಕ್ರಿಯಾಪಟು ಲೋಹಗಳನ್ನು ಅಪಕರ್ಷಕವಾಗಿ ಬಳಸಿ ಕಡಿಮೆ ಕ್ರಿಯಾಪಟು ಲೋಹಗಳನ್ನು ಅವುಗಳ ಆಕ್ಸೈಡ್ ಗಳಿಂದ ಪಡೆಯುವ ಸ್ಥಾನ ಪಲ್ಲಟ ಕ್ರಿಯೆಯನ್ನು ಥರ್ಮೈಟ್ ಕ್ರಿಯೆ ಎನ್ನುವರು.

ಥರ್ಮೈಟ್ ಕ್ರಿಯೆಗಳ ಪ್ರಾಯೋಗಿಕ ಅನ್ವಯಗಳು :

* ರೈಲ್ವೆ ಹಳಿಗಳನ್ನು ಜೋಡಿಸಲು
* ಮುರಿದ ಯಂತ್ರಭಾಗಗಳ ಜೋಡಣೆಯಲ್ಲಿ ಬಳಸುತ್ತಾರೆ.

16. ಒಬ್ಬ ವಿದ್ಯಾರ್ಥಿಯು, ಪ್ರನಾಳ A ನಲ್ಲಿ ಶುದ್ಧವಾದ ತಾಮ್ರದ ತಂತಿಯನ್ನು ಕಬ್ಬಿಣದ ಸಲ್ಫೇಟ್ ದ್ರಾವಣದಲ್ಲಿ ಮುಳುಗಿಸಿದ್ದಾನೆ. ಪ್ರನಾಳ B ನಲ್ಲಿ ಕಬ್ಬಿಣದ ಮೊಳೆಯನ್ನು ತಾಮ್ರದ ಸಲ್ಫೇಟ್ ದ್ರಾವಣದಲ್ಲಿ ಮುಳುಗಿಸಿದ್ದಾನೆ. ಎರಡೂ ಪ್ರನಾಳಗಳನ್ನು ಗಮನಿಸುತ್ತಾನೆ. ಹಾಗಾದರೆ,

1. ಯಾವ ಪ್ರನಾಳದಲ್ಲಿ ರಾಸಾಯನಿಕ ಕ್ರಿಯೆ ನಡೆಯಬಹುದು ?
2. ರಾಸಾಯನಿಕ ಕ್ರಿಯೆ ನಡೆದಿದೆ ಎನ್ನುವುದಕ್ಕೆ ಆಧಾರ ಏನು ?
3. ಈ ಕ್ರಿಯೆಯ ಫಲಿತಾಂಶವನ್ನು ಬರೆಯಿರಿ.

ಉತ್ತರ : 1. ಪ್ರನಾಳ B ನಲ್ಲಿ ರಾಸಾಯನಿಕ ಕ್ರಿಯೆ ನಡೆದಿದೆ.

2. ತಾಮ್ರದ ಸಲ್ಫೇಟ್ ನ ನೀಲಿ ಬಣ್ಣವು ಕಬ್ಬಿಣದ ಸಲ್ಫೇಟ್ ಉಂಟಾಗುವಿಕೆಯಿಂದ ಹಸಿರು ಬಣ್ಣಕ್ಕೆ ತಿರುಗುತ್ತದೆ.

3. ಫಲಿತಾಂಶ : ತಾಮ್ರ ಹಾಗೂ ಕಬ್ಬಿಣ ಇವುಗಳಲ್ಲಿ ಕಬ್ಬಿಣದ ಕ್ರಿಯಾಶೀಲತೆ ಹೆಚ್ಚು. ಏಕೆಂದರೆ ಅದು ತಾಮ್ರದ ಸಲ್ಫೇಟ್ ದ್ರಾವಣದಿಂದ ಕಡಿಮೆ ಕ್ರಿಯಾಶೀಲತೆ ಹೊಂದಿದ ತಾಮ್ರವನ್ನು ಸ್ಥಾನಪಲ್ಲಟಗೊಳಿಸುತ್ತದೆ.

17. ಖನಿಜ ಮತ್ತು ಅದುರುಗಳಿಗಿರುವ ವ್ಯತ್ಯಾಸ ತಿಳಿಸಿ.

| ಖನಿಜ | ಅದುರು |
|---|---|
| ಭೂತೊಟೆಯಲ್ಲಿ ನೈಸರ್ಗಿಕವಾಗಿ ದೊರೆಯುವ ಧಾತು ಅಥವಾ ಸಂಯುಕ್ತಗಳನ್ನು ಖನಿಜಗಳು ಎನ್ನುವರು. | ನಿರ್ಧಿಷ್ಟ ಲೋಹಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುವ ಹಾಗೂ ಲಾಭದಾಯಕಾವಾಗಿ ಲೋಹವನ್ನು ಹೊರತೆಗೆಯಬಹುದಾದ ಖನಿಜಗಳನ್ನು ಅದುರುಗಳು ಎನ್ನುವರು. |

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ